# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038






ಸಂಪುಟ:02 • ಸಂಚಿಕೆ: 62 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 31.08.2024 • ಶನಿವಾರ • ಪುಟ:04 • ಬೆಲೆ:2

Volume:02 • Issue: 62 • PRGI No:KARKAN/2023/88055 • VIJAYANAGARA • 31.08.2024 • Saturday • Page:04 • Rs:2


## ಮೈಕ್ರೋ ನ್ಯೂಸ್

### ಆಸ್ತಿ ತೆರಿಗೆ ಪಾವತಿಗೆ ರೀಯಾಯಿತಿ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಕೊಪ್ಪಳ:**
ಕೊಪ್ಪಳ ನಗರಸಭೆ ವ್ಯಾಪ್ತಿಯಲ್ಲಿ ಆಸ್ತಿ ಮಾಲೀಕರು ಆರ್ಥಿಕ ವರ್ಷದ ಪ್ರಾರಂಭದ 30 ದಿನಗಳಲ್ಲಿ ಪೂರ್ಣ ಪ್ರಮಾಣದ ಆಸ್ತಿ ತೆರಿಗೆ ಪಾವತಿ ಮಾಡಿದಲ್ಲಿ ಶೇ.5 ರಷ್ಟು ರಿಯಾಯಿತಿ ನೀಡಲು ಕಲ್ಪಿಸಿರುವ ಅವಧಿಯನ್ನು ಸೆಪ್ಟೆಂಬರ್ 14 ರವರೆಗೆ ವಿಸ್ತರಿಸಲಾಗಿದೆ. ನಗರದ ಸಾರ್ವಜನಿಕರು ತಮ್ಮ ತಮ್ಮ ನಿವೇಶನಗಳು ಹಾಗೂ ಕಟ್ಟಡಗಳ ಆಸ್ತಿ ಕರವನ್ನು ಸೆ.14ರೊಳಗಾಗಿ ಪಾವತಿ ಮಾಡಿ ಶೇ.5ರ ರಿಯಾಯಿತಿಯನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ನಗರಸಭೆಯ ಪೌರಾಯುಕ್ತರು ತಿಳಿಸಿದ್ದಾರೆ.


**ಹಂಪಿ ಟೈಮ್ಸ್ SSLC ಮಾರ್ಗದರ್ಶಿ**
**ಇ-ಪೇಪರ್‌ನಲ್ಲೂ ಲಭ್ಯ**
**ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..**
www.hampitimes.com
epaper.hampitimes.com


# ಹಂಪಿ ಸೊಬಗಿಗೆ ಮನಸೋತ ಕೇಂದ್ರ ಅಧಿಕಾರಿಗಳು

## ಐತಿಹಾಸಿಕ ವಿಜಯನಗರ ಜಿಲ್ಲೆಗೆ 16ನೇ ಕೇಂದ್ರ ಹಣಕಾಸು ಆಯೋಗದ ನಿಯೋಗ ಭೇಟಿ: ಜಿಲ್ಲಾಡಳಿತದಿಂದ ಆತ್ಮೀಯ ಸ್ವಾಗತ







■ **ಹಂಪಿ ಟೈಮ್ಸ್ ಹೊಸಪೇಟೆ**
ಭಾರತ ಸರ್ಕಾರದ 16ನೇ ಕೇಂದ್ರ ಹಣಕಾಸು ಆಯೋಗದ ನಿಯೋಗವು ಐತಿಹಾಸಿಕ ವಿಜಯನಗರ ಜಿಲ್ಲೆಗೆ ಶುಕ್ರವಾರ ಭೇಟಿ ನೀಡಿತು.

ಪೂರ್ವ ನಿಗದಿಯಂತೆ ಬೆಂಗಳೂರಿನಿಂದ ವಿಶೇಷ ವಿಮಾನದ ಮೂಲಕ ಹೊರಟು ಸಂಜೆ ವೇಳೆಗೆ ತೋರಣಗಲ್ಲಿಗೆ ಆಗಮಿಸಿದ ನಿಯೋಗ ದಲ್ಲಿನ ಅಧ್ಯಕ್ಷರು ಮತ್ತು ಸದಸ್ಯರಿಗೆವಿಜಯನಗರ ಜಿಲ್ಲಾಡಳಿತ ಮತ್ತು ಜಿಲ್ಲಾ ಪೊಲೀಸ್ ಇಲಾಖೆಯಿಂದ ಆತ್ಮೀಯವಾಗಿ ಸ್ವಾಗತ ಕೋರಲಾಯಿತು. ರಾಜ್ಯ ಸರ್ಕಾರದ ಪರವಾಗಿ ಆರ್ಥಿಕ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಎಲ್.ಕೆ.ಅತಿಕ್, ವಿಜಯನಗರ ಜಿಲ್ಲೆಯ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್., ಜಿಪಂ ಸಿಇಓ ನೊಂಗ್ಜಾಯ್ ಮೊಹಮದ್ ಅಲಿ ಅಕ್ರಮ ಷಾಹ ಸೇರಿದಂತೆ ಇತರರು ನಿಯೋಗದಲ್ಲಿ ಹಿರಿಯ ಅಧಿಕಾರಿಗಳಿಗೆ ಹೂಗುಚ್ಛ ನೀಡಿ ಆತ್ಮೀಯವಾಗಿ ಬರ ಮಾಡಿಕೊಂಡರು.

**ಪುಳಕಿತರಾದರು:** ತೋರಣಗಲ್ಲಿನ ಮೂಲಕ ರಸ್ತೆ ಮಾರ್ಗವಾಗಿ ವಿಶೇಷ ವಾಹನದ ಮೂಲಕ ವಿಜಯನಗರ ಜಿಲ್ಲೆಯ ಹೊಸಪೇಟೆಯ ಹಂಪಿಗೆ ಆಗಮಿಸುತ್ತಿದ್ದಂತೆ ನಿಯೋಗದಲ್ಲಿನ ಹಿರಿಯ ಅಧಿಕಾರಿಗಳು ಪುಳಕಿತರಾದರು.

**ವಿಜಯವಿಠ್ಠಲ ದೇವಾಲಯಕ್ಕೆ ಭೇಟಿ:** ಹಂಪಿಗೆ ಭೇಟಿ ನೀಡಿದ ಸಂದರ್ಭದಲ್ಲಿ ನಿಯೋಗದಲ್ಲಿನ ಅಧಿಕಾರಿಗಳು ಮೊದಲಿಗೆ ಹಂಪಿಯ ಪ್ರಸಿದ್ಧ ಶ್ರೀ ವಿಜಯವಿಠ್ಠಲ ದೇವಾಲಯಕ್ಕೆ ಭೇಟಿ ನೀಡಿದರು. ಬಳಿಕ ತಂಡವು ಶ್ರೀ ವಿರುಪಾಕ್ಷೇಶ್ವರ ದೇವಾಲಯಕ್ಕೆ ಭೇಟಿ ನೀಡಿತು. ಈ ವೇಳೆ ಸಹಾಯಕ ಆಯುಕ್ತರಾದ ವಿವೇಕಾನಂದ ಪಿ., ಜಿಪಂ ಉಪ ಕಾರ್ಯದರ್ಶಿ ಭೀಮಪ್ಪ ಲಾಳಿ ಹಾಗೂ ನಿಯೋಗಕ್ಕೆ ನಿಯೋಜನೆಯಾದ ಲೈಜನ್ ಅಧಿಕಾರಿಗಳು ಇದ್ದರು.






# ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಸಿದ್ಧತೆ ಮುನಿರಾಬಾದ್ ಟು ತೋರಣಗಲ್

## 49 ಕಿ.ಮೀ ವರೆಗೆ ಮಾನವ ಸರಪಳಿ ನಿರ್ಮಿಸುವ ಗುರಿ





■ **ಹಂಪಿ ಟೈಮ್ಸ್ ಹೊಸಪೇಟೆ**
ಸೆ.15 ರಂದು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು. ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣ ದಲ್ಲಿ ಶುಕ್ರವಾರ ನಡೆದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಅಂದು ವಿಜಯನಗರ ಜಿಲ್ಲೆಯಲ್ಲಿ ಅರ್ಥಪೂರ್ಣವಾಗಿ ಮಾನವ ಸರಪಳಿ ಕಾರ್ಯಕ್ರಮ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದ್ದು, ಮುನಿರಾಬಾದ್‌ನಿಂದ ತೋರಣಗಲ್ಲವರೆಗೆ ಒಟ್ಟು 49 ಕಿ.ಮೀ ವರೆಗೆ ಮಾನವ ಸರಪಳಿ ನಿರ್ಮಿಸುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅವರು >>3

# ಮಳೆಗೆ ಧರೆಗುರುಳಿದ ಮರ ವಿದ್ಯುತ್ ಕಂಬ

## ಆಟೋದಲ್ಲಿದ್ದ ಓರ್ವ ಪ್ರಯಾಣಿಕ, ಚಾಲಕ ಅಪಾಯದಿಂದ ಪಾರು





■ **ಹಂಪಿ ಟೈಮ್ಸ್ ಹೊಸಪೇಟೆ**
ನಗರದಲ್ಲಿ ಶುಕ್ರವಾರ ಸಂಜೆ ಸುರಿದ ಬಿರುಗಾಳಿ ಸಹಿತ ಭಾರೀ ಮಳೆಗೆ ಪಟೇಲ್ ನಗರ, ಚಿತ್ತವಾಡ್ಗಿ ದೇವಿನಗರದಲ್ಲಿ ಮರಗಳು ಧರೆಗುರುಳಿವೆ. ಪಟೇಲನಗರದಲ್ಲಿ ವಿದ್ಯುತ್ ಕಂಬದ ತಂತಿಗಳ ಮೇಲೆ ಮರ ಉರುಳಿದ್ದರಿಂದ ಕಂಬ ನೆಲಕಚ್ಚಿದೆ. ಆಟೋದಲ್ಲಿದ್ದ ಪ್ರಯಾಣಿಸುತ್ತಿದ್ದ ಇಬ್ಬರು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮಧ್ಯಾಹ್ನ ಆರಂಭಗೊಂಡ ಮಳೆ, ಸಂಜೆ 5 ಗಂಟೆ ವೇಳೆಗೆ ಬೀಸಿದ ಬಿರುಗಾಳಿಗೆ ಇಲ್ಲಿನ ಪಟೇಲ್ ನಗರದ 5ನೇ ಕ್ರಾಸ್‌ನಲ್ಲಿ ಎರಡು ಬೃಹತ್ ಮರಗಳು ನೆಲಕ್ಕುರುಳಿವೆ. ಈ ಪೈಕಿ ಒಂದು ಗಿಡ ಚಲಿಸುತ್ತಿದ್ದ ಆಟೋ ಮೇಲೆ ಉರುಳಿದೆ. ಈ ವೇಳೆ ಆಟೋ ದಲ್ಲಿದ್ದ ಓರ್ವ ಪ್ರಯಾಣಿಕ ಹಾಗೂ ಆಟೋ ಚಾಲಕ ಅಪಾಯವನ್ನು ಅರಿತು ಕ್ಷಣಾರ್ಧದಲ್ಲಿ ಆಟೋ ನಿಲ್ಲಿಸಿ, ದೂರಕ್ಕೆ ಓಡಿ ಹೋಗಿದ್ದಾರೆ. ಇದರಿಂದ ಸಂಭವಿಸಬಹುದಾದ ದೊಡ್ಡ ದುರಂತ 'ವೊಂದು ಕೂದಲೆಳೆ ಅಂತರದಲ್ಲಿ ತಪ್ಪಿದ್ದಂತಾಗಿದೆ.

ಇದೇ ಮರದ ಬುಡ ಮೇಲಾಗಿದ್ದರಿಂದ ಪಕ್ಕದಲ್ಲೇ ನಿಂತಿದ್ದ ಇನ್ನೋವಾ ಕಾರು, ಆಟೋ ಹಾಗೂ ರಸ್ತೆ ಮತ್ತೊಂದು ಬದಿಯಲ್ಲಿ ನಿಲ್ಲಿಸಲಾಗಿದ್ದ ದ್ವಿಚಕ್ರ ವಾಹನದ ಮೇಲೆ ಮರ ಮುರಿದು ಬಿದಿದ್ದಿದೆ. ಎರಡು ಬೃಹತ್ ಮರಗಳು ಉರುಳಿ ಬಿದ್ದಿದ್ದರಿಂದ ಈ ಭಾಗದಲ್ಲಿ ವಾಹನ ಸಂಚಾರಕ್ಕೆ ಅಡಚಣೆಯಾಗಿದ್ದು, ನೆಲಕ್ಕುರುಳಿದ ಮರಗಳ ತೆರವು ಕಾರ್ಯ ನಡೆಯಿತು. ರಾತ್ರಿ 8.30ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದ್ದರಿಂದ ನಾನಾ ಕಾರಣಗಳಿಂದ ಜನರು ಪರಿತಪಿಸಿದರು. ಜೆಸ್ಕಾಂ ಸಿಬ್ಬಂದಿ ಕೂಡಲೆ ವಿದ್ಯುತ್ ತಂತಿ ಸರಿಪಡಿಸಿ ವಿದ್ಯುತ್ ಪೂರೈಸಲು ಹರಸಾಹ ಸಪಟ್ಟರು.




## ವಿಜ್ಞಾನ

# ನೆಗಡಿಯಾದಾಗ ಕಣ್ಣುಗಳಲ್ಲಿ ಏಕೆ ನೀರು ಬರುತ್ತದೆ?

■ ಆರ್.ಬಿ.ಗುರುಬಸವರಾಜ

ಮೂರ್‍ನಾಲ್ಕು ದಿನದಿಂದ ಸುಷ್ಮಾಳಿಗೆ ನೆಗಡಿಯಾಗಿತ್ತು. ತುಂಬಾ ಸುಸ್ತಾಗಿದ್ದಳು. ನೆಗಡಿಯಾಗಿದ್ದರಿಂದ ಕಣ್ಣುಗಳು ಸಹ ಕೆಂಪಾಗಿದ್ದವು. ಇದನ್ನು ಗಮನಿಸಿದ ಸುಮಾ "ಯಾಕೆ ನಿನ್ನ ಕಣ್ಣುಗಳು ಕೆಂಪಾಗಿವೆ?" ಎಂದಳು. ನೆಗಡಿಯಾಗಿದ್ದರಿಂದ ಕಣ್ಣು ಕೆಂಪಾಗಿವೆ ಎಂದು ಸುಷ್ಮಾ ಕಣ್ಣೊರೆಸಿಕೊಂಡಳು. "ಯಾಕೆ ಅಳ್ತಾ ಇದಿಯಾ?" ಎಂದಳು ಸುಮಾ. 'ಅಳ್ತಾ ಇಲ್ಲ. ನೆಗಡಿಯಾಗಿರೊದ್ರಿಂದ ಕಣ್ಣಲ್ಲಿ ನೀರು ಬರ್‍ತಾ ಇದೆ' ಎಂದಳು ಸುಷ್ಮಾ. ಇಬ್ಬರ ಮಾತುಗಳನ್ನು ಕೇಳುತ್ತಾ ಕುಳಿತಿದ್ದ ತಂದೆಯ ಬಳಿ ತೆರಳಿದ ಸುಮಾ "ಪಪ್ಪಾ, ನೆಗಡಿಯಾದಾಗ ಕಣ್ಣಲ್ಲಿ ಏಕೆ ನೀರು ಬರುತ್ತದೆ?" ಎಂದಳು. ಅದಕ್ಕೆ ತಂದೆಯ ಉತ್ತರ ಹೀಗಿತ್ತು.

ನೆಗಡಿಯಾದಾಗ ಹಲವಾರು ಕಾರಣಗಳಿಂದ ಕಣ್ಣುಗಳಲ್ಲಿ ನೀರು ಬರುತ್ತದೆ. ಸಾಮಾನ್ಯವಾಗಿ ನೆಗಡಿಯಾದಾಗ ಮೂಗಿನ ಒಳಪದರವು



ಉರಿಯುತ್ತದೆ ಮತ್ತು ಹೆಚ್ಚುವರಿ ಲೋಳೆಯನ್ನು ಉತ್ಪತ್ತಿ ಮಾಡುತ್ತದೆ. ಈ ಹೆಚ್ಚುವರಿ ಲೋಳೆಯು ಮೂಗಿನ ಬಳಿ ಇರುವ ಕಣ್ಣೀರಿನ ನಾಳಗಳಿಗೆ ಹರಿಯಬಹುದು. ಇದರಿಂದಾಗಿ ಕಣ್ಣುಗಳಲ್ಲಿ ನೀರು ಬರುತ್ತವೆ. ಇದಕ್ಕಿಂತ ಮುಖ್ಯವಾಗಿ 'ವೈರಲ್ ಕಾಂಜಂಕ್ಟಿವಿಟಿಸ್' ಎಂಬ ಸ್ಥಿತಿಯ ಕಾರಣದಿಂದಾಗಿ ನೆಗಡಿಯದಾಗ ಕಣ್ಣಲ್ಲಿ ನೀರು ಬರುತ್ತದೆ. ಕಾಂಜಂಕ್ಟಿವಾ ಎಂಬುದು ಉರಿಯೂತವಾಗಿದ್ದು, ಇದು ಕಣ್ಣಿನ ಬಿಳಿ ಭಾಗವನ್ನು ಆವರಿಸುವ ಮತ್ತು ಕಣ್ಣುರೆಪ್ಪೆಯ ನಾಳಗಳಿಗೆ ಅಂಟಿರುವ ತೆಳುವಾದ ಅಂಗಾಂಶವಾಗಿದೆ. ನೆಗಡಿಗೆ ಕಾರಣವಾದ ವೈರಸ್ ಕಾಂಜಂಕ್ಟಿವಾವನ್ನು ಸಹ ಸೋಂಕು ಮಾಡುತ್ತದೆ.

ಉರಿಯೂತವು ಕಣ್ಣುಗಳು ಕೆಂಪಾಗಲು, ತುರಿಕೆ ಉಂಟಾಗಲು ಮತ್ತು ನೀರಿನಂಶಕ್ಕೆ ಕಾರಣವಾಗಬಹುದು. ಕಣ್ಣೀರಿನ ನಾಳಗಳು ಉರಿಯೂತದ ಕಿರಿಕಿರಿಯ ಪರಿಣಾಮವಾಗಿ ಹೆಚ್ಚುವರಿ ಕಣ್ಣೀರನ್ನು ಉಂಟುಮಾಡಬಹುದು. ವೈರಲ್ ಕಾಂಜಂಕ್ಟಿವಿಟಿಸ್‌ನ ಇತರ ರೋಗಲಕ್ಷಣಗಳು ಕಣ್ಣುಗಳಲ್ಲಿ ಬಿಸಿಯಾದ ಸಂವೇದನೆ, ಬೆಳಕಿಗೆ ಸೂಕ್ಷ್ಮತೆಯನ್ನು ಒಳಗೊಂಡಿವೆ. ಆದ್ದರಿಂದ ನೆಗಡಿಯಾದಾಗ ಕಣ್ಣುಗಳು ಬಿಸಿಯಾಗಿರುತ್ತವೆ ಮತ್ತು ಪ್ರಖರ ಬೆಳಕನ್ನು ನೋಡಲು ತೊಂದರೆಯಾಗುತ್ತದೆ.

ನೆಗಡಿಯ ಎಲ್ಲಾ ಪ್ರಕರಣಗಳು ವೈರಲ್ ಕಾಂಜಂಕ್ಟಿವಿಟಿಸ್‌ಗೆ ಕಾರಣವಲ್ಲ ಎಂಬುದನ್ನು ಗಮನಿಸುವುದು ಮುಖ್ಯ. ಅಲರ್ಜಿಗಳು ಅಥವಾ ಸೈನಸ್ ತೊಂದರೆಯಂತಹ ಇತರ ಅಂಶಗಳು ಸಹ ಕಣ್ಣುಗಳಲ್ಲಿ ನೀರಿಗೆ ಕಾರಣವಾಗಬಹುದು. ನಿರಂತರ ಅಥವಾ ತೀವ್ರವಾದ ರೋಗಲಕ್ಷಣಗಳನ್ನು ಅನುಭವಿಸುತ್ತಿದ್ದರೆ ನಿಖರವಾದ ರೋಗನಿರ್ಣಯ ಮತ್ತು ಸರಿಯಾದ ಚಿಕಿತ್ಸೆಗಾಗಿ ಆರೋಗ್ಯ ವೃತ್ತಿಪರರನ್ನು ಸಂಪರ್ಕಿಸುವುದು ಉತ್ತಮವಾಗಿದೆ.


## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**


## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.


**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038



## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**


# ಬದುಕಿನ ಚುಕ್ಕಾಣಿಯ ಹಿಡಿದುಕೋ... ಕೈಜಾರುವ ಮುನ್ನ

ಇದು ನಮ್ಮ ನಿಮ್ಮೆಲ್ಲರ ಬಾಳಿನಲ್ಲಿ ಜರುಗುವ ಕಥೆ. ಜೀವನದ ಕಟು ಸತ್ಯವನ್ನು ತೋರುವ ಈ ಕಥೆಯನ್ನು ಗಮನವಿಟ್ಟು ಓದಿ.

ಬದುಕಿನ ಮೊದಲ 20 ವರ್ಷ ಹೇಗೆ ಕಳೆದವೆಂದೇ ಗೊತ್ತಿಲ್ಲದಂತೆ ಶಾಲೆಯ ಆಟ–ಪಾಠ, ಓದು, ಕಾಲೇಜು, ಸ್ನೇಹಿತರು ಹೀಗೆ ಕಳೆದುಹೋದವು. ಕೆಲಸದ ಹುಡುಕಾಟ ಶುರುವಾಯಿತು. ಎರಡು ಮೂರು ಕೆಲಸಗಳನ್ನು ಮಾಡಿ ಅಂತಿಮವಾಗಿ ಒಂದು ನೌಕರಿಯಲ್ಲಿ ಗಟ್ಟಿಯಾಗಿ ಉಳಿದುಕೊಂಡೆ. ಬದುಕಿಗೊಂದು ಸ್ಥಿರತೆ ಬಂತು.

ಮೊದಲ ಸಂಬಳದ ಚೆಕ್ ಬಂದು ಅದನ್ನು ಬ್ಯಾಂಕಿನಲ್ಲಿ ಡೆಪಾಸಿಟ್ ಮಾಡಿದ ಹುಮ್ಮಸ್ಸು ನನ್ನದಾಗಿತ್ತು.... ಮುಂದೆ ಹೀಗೆಯೇ ಅಸಂಖ್ಯ ಹಣದ ಚೆಕ್ಕಳು ನನ್ನ ಅಕೌಂಟನ್ನು ತುಂಬತೊಡಗಿದವು ಹೀಗೆಯೇ ಎರಡು ಮೂರು ವರ್ಷ ಕಳೆಯಿತು.

ಮನೆಯಲ್ಲಿ ಮದುವೆಯ ಮಾತುಕತೆ ನಡೆದು 25ಕ್ಕೆ ಮದುವೆಯಾಗಿ ವೈವಾಹಿಕ ಬದುಕಿನ ರಾಮಕಥೆ ಪ್ರಾರಂಭವಾಯಿತು. ಪ್ರೀತಿ, ಪ್ರೇಮ, ಪ್ರಣಯ, ಮೆಲು ಮಾತುಗಳು, ಭವಿಷ್ಯದ ಕುರಿತ ಬಣ್ಣದ ಕನಸುಗಳು, ಗಂಟೆಗಟ್ಟಲೆಯ ಫೋನ್ ಕರೆಗಳು, ಕೈ ಕೈ ಹಿಡಿದು ಓಡಾಟದಲ್ಲಿ ಕಾಲ ಉರುಳಿದ್ದೇ ಗೊತ್ತಾಗಲಿಲ್ಲ.

ಎಲ್ಲರ ಸಂಸಾರದಂತೆ ನಮ್ಮ ಬದುಕಿನಲ್ಲೂ ಸಂಭ್ರಮ ಕುಡಿಯೊಡೆಯಿತು ಮಗುವಿನ ರೂಪದಲ್ಲಿ. ತೊಟ್ಟಿಲು ತೂಗುತ್ತಾ ನಮ್ಮ ಮಾತನ್ನು ಮತ್ತು ಮಗುವಿನ ಮಾತನ್ನು ನಾವೇ ಆಡುತ್ತಾ ಮಗುವಿನ ಲಾಲನೆ ಪಾಲನೆಯಲ್ಲಿ ಬದುಕು ಸಾಗಿತು. ಧಾವಂತದಲ್ಲಿ ಏಳುವುದು, ಉಣಿಸುವುದು, ತಿನ್ನಿಸುವುದು, ಮಗುವಿನ ವಿಸರ್ಜನೆಗಳನ್ನು ಕೂಡ ಹೇಸಿಗೆ ಇಲ್ಲದೆ ಬಳಿಯುವುದು ಅಂಬೆಗಾಲಿಡುತ್ತಾ ಬಂದ ಮಗುವನ್ನು ತಬ್ಬ ಮುದ್ದಾಡಿ ಆಡುವುದು. ಹಗಲು ರಾತ್ರಿಗಳ ಪರಿವೆ ಕೂಡ ಇರಲಿಲ್ಲ. ಮಗು ಮಲಗಿದಾಗ ತುಸು ವಿಶ್ರಾಂತಿ ತೆಗೆದುಕೋ ಎಂದರೂ ಕೂಡ ಮಗು ಎದ್ದ ಮೇಲೆ ಮಾಡಲಾಗುವುದಿಲ್ಲ ಎಂದು ಗಡಬಡಿಸಿ ಕೆಲಸ ಮಾಡುವುದು... ಹೀಗೆ ದಿನ ಕಳೆದದ್ದೇ ಗೊತ್ತಾಗಲಿಲ್ಲ.

ಮಗುವಿನ ಜವಾಬ್ದಾರಿಯ ನಡುವೆ ನಾವಿಬ್ಬರೂ ಒಬ್ಬರಿಗೊಬ್ಬರು ಪರಸ್ಪರ ಸಮಯ ಕೊಡಲೇ ಇಲ್ಲ. ಯಾವಾಗ ನಾವಿಬ್ಬರೂ ಹಿಡಿದು ಓಡಾಡುತ್ತಿದ್ದ ಕೈ ಜಾರಿ ಮಗುವಿನ ಕೈಹಿಡಿದೆವು, ಯಾವಾಗ ನಮ್ಮಿಬ್ಬರ ಬಗ್ಗೆ ಮಾತನಾಡುವುದನ್ನುಮರೆತೆವೋ, ಜೊತೆ ಜೊತೆಯಾಗಿ ಓಡಾಡುವುದನ್ನು ಕೈ ಕೈ ಹಿಡಿದು ದೀರ್ಘ ರಾತ್ರಿಗಳಲ್ಲಿ ವಾಕ್ ಮಾಡುವುದನ್ನು, ಸೋಫಾದ ಮೇಲೆ ಒಬ್ಬರಿಗೊಬ್ಬರು ಅಂಟಿ ಕುಳಿತು ಹಾಡು ಕೇಳುವುದನ್ನು ನಿಲ್ಲಿಸಿದೆವೋ ಗೊತ್ತೇ ಆಗಲಿಲ್ಲ.

ಮಗು ದೊಡ್ಡದಾಗುತ್ತಲೇ ಹೋಯಿತು ನಾನು ಮಗುವಿನ ಲಾಲನೆ ಪಾಲನೆ,ಅಡುಗೆ, ತಿಂಡಿ ಮನೆಗೆಲಸದ ಸುತ್ತ, ಮುಂದೆ ಮಗುವಿನ ಶಾಲೆ ಪಾಠ ಪ್ರವಚನಗಳಲ್ಲಿ ಗಮನಹರಿಸಿದರೆ ಆತ ತನ್ನ ವೃತ್ತಿಯೆಡೆ ಗಮನ ಕೇಂದ್ರಿಕರಿಸಿದ. ಹೊಸ ಅವಕಾಶಗಳು, ಜವಾಬ್ದಾರಿಗಳು ಆತನನ್ನು ಬದುಕಿನ ನಾಗಾಲೋಟದಲ್ಲಿ ಓಡಿಸತೊಡಗಿತ್ತು. ಗರ್ಭಿಣಿಯಾದಾಗಲೇ ನಾನು ಕೆಲಸ ಬಿಟ್ಟ ಕಾರಣ ಒಬ್ಬರ ದುಡಿಮೆಯಲ್ಲಿಯೇ ಮನೆ ನಡೆಯಬೇಕಿತ್ತು. ಮಗುವಿನ ಹೆಚ್ಚಿನ ವಿದ್ಯಾಭ್ಯಾಸ, ಬಟ್ಟೆ ಬರೆ, ಔಷಧಿ ಆಸ್ಪತ್ರೆ ಏರುತ್ತಿರುವ ಮನೆಯ ಖರ್ಚುವೆಚ್ಚಗಳು ಇದ್ದುದರಲ್ಲಿಯೇ ಹೊಂದಿಕೊಂಡು ಹೋಗಲು ಸಾಧ್ಯವಾಗದ ನಾಗರಿಕ ಜೀವನದ



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಸವಾಲುಗಳು ಬ್ಯಾಂಕ ಖಾತೆಯಲ್ಲಿನ ಹಣವನ್ನು ನಿಧಾನವಾಗಿ ಕರಗಿಸಿತು.

ಇದೀಗ ನನಗೆ 35... ಒಂದೇ ಮಗು ಸಾಕು ಎಂಬ ನಿರ್ಧಾರ ನಮ್ಮದಾಗಿತ್ತು. ಮನೆ, ಕಾರು, ಒಳ್ಳೆಯ ಜೀವನ ಶೈಲಿಯನ್ನು ಹೊಂದಿದ್ದರೂ, ಮಗು ಕೂಡ ತಕರಾರಿಲ್ಲದೆ ಓದುತ್ತಿದ್ದರೂ ಏನನ್ನೋ ಕಳೆದುಕೊಂಡ ಭಾವ. ಮೊದಮೊದಲು ಒಂಬಾವಾಗಾದರೊಮ್ಮೆ ಸ್ನೇಹಿತರ ಜೊತೆಗೆ ತಡ ರಾತ್ರಿಯವರೆಗೆ ಹರಟೆ ಹೊಡೆದು ಊಟ ಮಾಡಿ ತುಸು ಪೆಗ್ಗೇರಿಸಿ ಮನೆಗೆ ಬರುತ್ತಿದ್ದ ಗಂಡ ಈಗ ವಾರದಲ್ಲಿ ಎರಡು ಮೂರು ದಿನ ಹೊರಗಡೆಯೇ ತಿಂಡಿ ತೀರ್ಥ ಮುಗಿಸಿಕೊಂಡು ಬರುವುದು ಮಾಮೂಲಾಗಿತ್ತು.

ಇದು ನಮ್ಮಿಬ್ಬರ ನಡುವಿನ ಅಸಹನೆಗೆ ಕಿರಿಕಿರಿಗೆ ಕೂಡ ಕಾರಣವಾಗಿತ್ತು. ಆತನ ಮುಂಗೋಪ ಸಿಟ್ಟುಗಳಿಗೆ ನನ್ನ ಒರಟಾದ ಉತ್ತರಗಳು ಪರಿಸ್ಥಿತಿಯನ್ನು ಗಂಭೀರತೆಗೆ ಕರೆದೊಯ್ಯುತ್ತಿದ್ದವು. ಮನಸ್ತಾಪಕ್ಕೆ ಕಾರಣವಾಗುತ್ತಿದ್ದವು. ಇಬ್ಬರೂ ಕೋಪದಿಂದ ಕೂಗಾಡಿ ತಲೆಬಿಸಿ ಮಾಡಿಕೊಂಡು ಮುಖ ತಿರುವುತ್ತಿದ್ದೆವು. ಮಾತನಾಡಿದರೆ ತಾನೆ ಜಗಳ.... ಮಾತನಾಡದಿದ್ದರೆ!! ಬರ ಬರುತ್ತಾ ನಮ್ಮಿಬ್ಬರ ನಡುವೆ ಮಾತುಕತೆ ಕಡಿಮೆಯಾಯಿತು. ದಿನಗಳು ಕಳೆಯುತ್ತಾ ಹೋದಂತೆ ಮಗು ಹತ್ತನೇ ತರಗತಿ ಪಾಸಾಗಿ ಕಾಲೇಜಿಗೆ ಹೋಗುವಂತಾಯಿತು. ಆತನ ಮುಂದಿನ ವಿದ್ಯಾಭ್ಯಾಸಕ್ಕೆ ಅಕೌಂಟಿನಲ್ಲಿನ ಹಣವೆಲ್ಲ ಖರ್ಚಾಗಿತ್ತು

ಮಗ ಮುಂದಿನ ವಿದ್ಯಾಭ್ಯಾಸಕ್ಕೆ ಹೊರ ಊರಿಗೆ ಹೋದ ಮೇಲೆ ನಮ್ಮಿಬ್ಬರ ಮೌನ ಇಡೀ ಮನೆಯನ್ನು ಆಳತೊಡಗಿತು. ಅಂತ ಒಂದು ಮೌನದ ಕ್ಷಣದಲ್ಲಿ ನನ್ನ ಮನಸ್ಸು ಆತ ನನ್ನ ಬಳಿ ಬಂದು ಕೂರಬಾರದೇ? ಕೈ ಹಿಡಿದು ಆಪ್ತವಾಗಿ ಮಾತನಾಡಬಾರದೇ? ಇಬ್ಬರು ಜೊತೆಯಾಗಿ ವಾಕಿಂಗ್ ಹೋಗಲು ಕೇಳಬಾರದೇ?ಎಂಬ ಭಾವ ಕಾಡಿತು. ನಾನೇ ಮುಂದಾಗಿ ಕೇಳಲೇ ಎಂದರೆ ಅಹಂ ಭಾವ ತಡೆಯುತ್ತಿತ್ತು.



ಆದರೂ ಅದೊಮ್ಮೆ ಆತ ನನ್ನನ್ನು ಹೊರಗೆ ಸುತ್ತಾಡಿ ಬರಲು ಕರೆದಾಗ ನಾನು ತುಸು ವಿಚಿತ್ರವಾಗಿ ಕಣ್ಣುಗಳನ್ನು ದೊಡ್ಡದಾಗಿಸಿ ಮನೆಯಲ್ಲಿ ಅದೆಷ್ಟು ಕೆಲಸವಿರುತ್ತದೆ ಗೊತ್ತಲ್ಲವೇ? ಕೆಲಸ ಬಿಟ್ಟು ಹೇಗೆ ಬರಬೇಕು ಎಂದು ಸೊಂಟಕ್ಕೆ ಸೆರಗನ್ನು ಸಿಕ್ಕಿಸಿ ನನ್ನ ಕೆಲಸಕ್ಕೆ ತೊಡಗಿಕೊಂಡರೆ ಮನದ ಇನ್ನೊಂದು ಮೂಲೆ ಇರಲಿ ಬಾ ಕೆಲಸ ಇದ್ದದ್ದೆ ಆಮೇಲೆ ಬಂದು ಇಬ್ಬರೂ ಸೇರಿ ಮಾಡೋಣ ಎಂದು ಆತ ಹೇಳಬಾರದೇ! ಹಾಗೆ ಹೇಳಿದರೆ ಹೊರಟುಬಿಡುತ್ತೇನೆ ಎಂದು ಚೀರುತ್ತಿತ್ತು. ಆದರೆ ಒಂದೂ ಮಾತನಾಡದೆ ಆತ ಸುಮ್ಮನೆ ಪೇಪರ್ ಹಿಡಿದು ಕುಳಿತುಬಿಟ್ಟ.

ಹೀಗೆ ದಿನಗಳು ಕಳೆದು ನಮ್ಮಿಬ್ಬರ ಕಣ್ಣಿಗೆ ಕನ್ನಡಕ ಬಂದಿತ್ತು, ಕೂದಲು ತನ್ನ ದಟ್ಟ ಕಪ್ಪು ಬಣ್ಣ ಕಳೆದುಕೊಂಡು ಅಲ್ಲಲ್ಲಿ ಬಿಳಿ ಕೂದಲು ಕಾಣತೊಡಗಿತ್ತು. ಮನ ಗೊಂದಲದ ಗೂಡಾಗುತ್ತಿತ್ತು. ಇದೆಲ್ಲದರಿಂದ ಹೊರಬರಲು ನಾನು ನನ್ನದೇ ವಯಸ್ಸಿನ ಸ್ನೇಹಿತೆಯರ ಜೊತೆ ಪಾರ್ಕು,ದೇವಸ್ಥಾನ, ಪಿಕ್ನಿಕ್, ವಾಕಿಂಗ್, ಕಿಟ್ಟಿ ಪಾರ್ಟಿ ಎಂದು ನನ್ನನ್ನು ನಾನು ತೊಡಗಿಸಿಕೊಂಡರೆ ಆತ ತನ್ನದೇ ಸ್ನೇಹಿತರ ವಲಯದಲ್ಲಿ ಕಾಲ ಕಳೆದು ಮನೆಗೆ ಬರತೊಡಗಿದ.





ಮಗನ ಓದು ಮುಗಿದು ಆತ ಕೆಲಸಕ್ಕೆ ಸೇರಿ ತನ್ನ ಕಾಲ ಮೇಲೆ ನಿಂತು ನಮ್ಮಿಬ್ಬರಿಗೂ ಸಂಭ್ರಮ ಸಂತಸವನ್ನುಂಟು ಮಾಡಿದ. ಮುಂದೆ ಕೆಲವೇ ದಿನಗಳಲ್ಲಿ ಹೆಚ್ಚಿನ ಅವಕಾಶ ದೊರೆತು ವಿದೇಶಕ್ಕೆ ಹಾರಿ ಹೋದ ಆತ. ಮಗ ಮನೆಯಲ್ಲಿದ್ದಾಗ ಸಂತಸದ ಗೂಡಾಗುತ್ತಿದ್ದ ಮನೆ ಮತ್ತೆ ಮೌನದ ಮುಸುಕು ಹೊದ್ದು ಕುಳಿತಿತ್ತು. ಪರಸ್ಪರ ಅವಶ್ಯಕತೆ ಇದ್ದಷ್ಟೇ ಮಾತನಾಡಿದರೂ ನಮ್ಮಿಬ್ಬರ ಮನಗಳು ಬಹಳಷ್ಟು ದೂರವಾಗಿದ್ದವು. ಜೊತೆಯಾಗಿ ಸಾಗುವ ರೈಲಿನ ಹಳಿಗಳಂತೆ, ನದಿಯ ಎರಡು ದಂಡೆಗಳಂತೆ ನಾವಿಬ್ಬರೂ ಪರಸ್ಪರ ಜೊತೆಯಾಗಿದ್ದರೂ ಜೊತೆ ಇಲ್ಲದವರಾಗಿದ್ದೆವು.

ಇದೀಗ ನಿವೃತ್ತಿ ಹೊಂದಿದ ನನ್ನ ಪತಿ ಮನೆಯಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದರೂ ಮಾತಿಗೆ ಬರ. ಇಬ್ಬರಿಗೂ ನಿಧಾನವಾಗಿ ಮಾಗಿದ ವಯಸ್ಸು ತನ್ನ ಕೊಡುಗೆಗಳನ್ನು ಧಾರಾಳವಾಗಿ ನೀಡಿ ಬಿ ಪಿ, ಶುಗರ್, ಸೊಂಟ ಮತ್ತು ಮೈಕೈ ನೋವುಗಳು ಜೊತೆಯಾದವು. ಇದುವರೆಗೆ ಮೇಕಪ್ ಸಾಮಾನುಗಳು, ಸುಗಂಧ ದ್ರವ್ಯಗಳ ಗೂಡಾಗಿದ್ದ ನಮ್ಮ ಡ್ರೆಸ್ಸಿಂಗ್ ಮಿರರ್ ನ ಮುಂದೆ ಔಷಧಿ ಮಾತ್ರೆ ನೋವಿನ ಮುಲಾಮುಗಳ ತಮ್ಮ ಸ್ಥಾನವನ್ನು ಕಂಡುಕೊಂಡವು.

.ಆಗಾಗ ಮಗ ಮಾಡುತ್ತಿದ್ದ ಫೋನ್ ಕರೆ ನಮ್ಮಿಬ್ಬರಲ್ಲಿ ಜೀವನೋತ್ಸಾಹವನ್ನು ಹುಟ್ಟಿಸುತ್ತಿದ್ದರೂ ಇದೀಗ ಚಾತಕ ಪಕ್ಷಿಯಂತೆ ಅವನ ಬರುವಿಕೆಗಾಗಿ ಇಬ್ಬರೂ ಕಾಯುತ್ತಿದ್ದೆವು. ಮಗನಿಗೆ ಮದುವೆ ಮಾಡಿ ಆತನ ಸಂಸಾರ ಬೆಳೆಯುವುದನ್ನು ನೋಡುವ ಆಸೆ ನಮ್ಮಿಬ್ಬರಲ್ಲಿ ಗುಟ್ಟಾಗಿ ಒಡಮೂಡಿತ್ತು.

ಅದೊಂದು ದಿನ ಸೋಫಾದ ಮೇಲೆ ಕುಳಿತು ನಾನು ಮೊಬೈಲ್ ನೋಡುತ್ತಿದ್ದರೆ ಪೇಪರ್ ನಲ್ಲಿ ಮುಖ ಹುದುಗಿಸಿದ್ದ ನನ್ನ ಪತಿಯ ಮೊಬೈಲ್ಗೆ ಕರೆಯೊಂದು ಬಂದು ಒಂದೆರಡು ನಿಮಿಷದ ಮಾತುಕತೆಯಲ್ಲಿ ಕಟ್ಟಾಯಿತು. ವಿವರ್ಣಗೊಂಡ ಮುಖವನ್ನು ಹೊತ್ತ ಪತಿಯನ್ನು ನೋಡಿ ಏನಾಯಿತು ಎಂದು ತಲೆ ಎತ್ತಿದಾಗ ಮಗ ವಿದೇಶದಲ್ಲಿಯೇ ಒಂದು ಹುಡುಗಿಯನ್ನು ಮದುವೆಯಾಗಿದ್ದು ಇನ್ನು ಅಲ್ಲಿಯೇ ಇರುತ್ತಾನೆ ಎಂಬ ವಿಷಯವನ್ನು ನಿರ್ಭಾವುಕರಾಗಿ ಪತಿ ಹೇಳಿದರೆ, ನಾನು ಸೋಫಾದಲ್ಲಿ ಮತ್ತಷ್ಟು ಕುಸಿದು ಕುಳಿತೆನು. ಬದುಕು ಬದಲಾಗಬಹುದು ಎಂಬ ಆಶಾಗೋಪುರ ಕ್ಷಣಾರ್ಧದಲ್ಲಿ ನೆಲಕಚ್ಚಿತ್ತು.

ಪತಿ ಮುಂದುವರೆದು ಬ್ಯಾಂಕಿನಲ್ಲಿರುವ ಹಣವನ್ನು ಯಾವುದಾದರೂ ವೃದ್ಧಾಶ್ರಮಕ್ಕೆ ಕಟ್ಟಿ ಇನ್ನು ಮೇಲೆ ಅಲ್ಲಿಯೇ ಇರುವಂತೆ ಸಲಹೆ ನೀಡಿದ್ದು, ವಯಸ್ಸಾದ ಮೇಲೆ ತೆಗೆದುಕೊಳ್ಳಬೇಕಾದ ಕೆಲ ಮುನ್ನೆಚ್ಚರಿಕೆ ಕ್ರಮಗಳನ್ನು ಹೇಳಿದ್ದಾನೆಂದು ಹೇಳಿದಾಗ ನನ್ನ ದುಃಖದ ಕಟ್ಟೆ ಒಡೆದಿತ್ತು.

ಅಳುತ್ತಿದ್ದ ನನ್ನ ಬಳಿ ಸಾರಿದ ಪತಿ ಸೋಫಾದ ಮೇಲೆ ನನ್ನ ಪಕ್ಕದಲ್ಲಿ ಕುಳಿತು ನನ್ನ ಕೈಯನ್ನು ತನ್ನ ನಡುಗುತ್ತಿದ್ದ ಕೈಯಲ್ಲಿ ಹಿಡಿದು ನನ್ನನ್ನು ತನ್ನ ಎದೆಗೆ ಒತ್ತಿ ಸಮಾಧಾನ ಪಡಿಸಿದಾಗ ಆ ನೋವಿನಲ್ಲಿಯೂ ಕೂಡ ನನ್ನ ಕಣ್ಣಲ್ಲಿ ಹೊಂಬೆಳಕು ಮೂಡಿತು. ಮನ ಮತ್ತೆ ಹರ್ಷದಿಂದ ಗರಿಗೆದರಿತು.

ನಡೆ, ದೇವಸ್ಥಾನಕ್ಕೆ ಹೋಗಿ ನಂತರ ಎಲ್ಲಾದರೂ ಸುತ್ತಾಡಿ ಊಟ ಮಾಡಿ ಮನೆಗೆ ಬರೋಣ ಎಂದು ಆತ ಕರೆದಾಗ ತಕ್ಷಣ ನಾನು ಸರಿ ಎಂದು ತಯಾರಾದೆ.

ಬಹಳ ವರ್ಷಗಳ ನಂತರ ನಾವಿಬ್ಬರೂ ಸಡಗರ ಸಂಭ್ರಮದಿಂದ ತಯಾರಾಗಿ ಹತ್ತಿರದ ದೇವಸ್ಥಾನಕ್ಕೆ ಹೋಗಿ ದೇವರ ದರ್ಶನ ಪಡೆದೆವು. ನಮ್ಮಿಬ್ಬರ ಅಹಮ್ಮಿನ ಕೋಟೆಯೊಳಗೆ ಬಂಧಿಯಾಗಿದ್ದ ಪ್ರೀತಿ ಪ್ರೇಮದ ನವಿರು ಭಾವ, ನಿನಗಾಗಿ ನಾನು ನನಗಾಗಿ ನೀನು ಎಂಬ ಮಾತನ್ನು ಕೇಳಬೇಕೆಂಬ ಎಷ್ಟೋ ವರ್ಷಗಳ ಕಾತರದ ಗಳಿಗೆ ನಮ್ಮ ಬಾಳಿನಲ್ಲಿ ಮೂಡಿತ್ತು.

ಕೈ ಕೈ ಹಿಡಿದು ನಡೆಯದಿದ್ದರೂ ಇದೀಗ ಒಬ್ಬರಿಗೊಬ್ಬರು ಆಸರೆಯಾಗಿ, ಒಬ್ಬರಿನ್ನೊಬ್ಬರ ಕೆಲಸಗಳಲ್ಲಿ ಸಹಾಯಕರಾಗಿ, ಜೊತೆಯಾಗಿ ಎದ್ದು ಪರಸ್ಪರ ಮಾತನಾಡುತ್ತಾ, ಅಡುಗೆ ತಿಂಡಿ ಮಾಡಿ ಸವಿಯುತ್ತಾ, ಮುಂಜಾನೆ ಮತ್ತು ಸಂಜೆ ವಾಕಿಂಗ್ ಮಾಡುತ್ತಾ ಒಬ್ಬರಿನ್ನೊಬ್ಬರ ಕಾಳಜಿ ಮಾಡುತ್ತಾ, ಆಗಾಗ ಮಗ ಸೊಸೆ ಮಾಡುವ ಫೋನ್ ಕರೆಗಾಗಿ ಕಾಯುತ್ತಾ ಸಾಗಿರುವ ನಮ್ಮ ಬದುಕಿನಲ್ಲಿನ ಅಹಂ ಎಂಬ ನಿರ್ವಾತ ಮಾಗಿದ ಪ್ರೇಮದ ಎಳೆ ಬಿಸಿಲಿಗೆ ಕರಗಿ ಹೋಗಿದೆ. ಸ್ನೇಹಿತರೆ, ಬದುಕು ಎಲ್ಲರಿಗೂ ಸಮಾನ ಅವಕಾಶಗಳನ್ನು ನೀಡುವುದಿಲ್ಲ ನಿಜ. ಆದರೆ ನಮಗೆ ಸಿಕ್ಕಷ್ಟನ್ನು ಸರಿಯಾಗಿ ದಕ್ಕಿಸಿಕೊಂಡು ಬದುಕುವುದು ಜಾಣರ ಲಕ್ಷಣ. ದಾಂಪತ್ಯ ಎಂಬುದು ಜೊತೆಯಾಗಿ ಎಳೆಯಬೇಕಾದ ಜೋಡೆತ್ತಿನ ಪಯಣ. ಇದರಲ್ಲಿ ಇಬ್ಬರ ಪ್ರಯತ್ನವು ಮುಖ್ಯ. ನಮ್ಮ ನಮ್ಮ ಅಹಮ್ಮಿನ ಕೋಟೆಯಿಂದ ಹೊರಬರದೆ ಇದ್ದರೆ ಬದುಕು ಕೊನೆಯವರೆಗೂ ನೀರಸವಾಗಿ ಸಾಗುತ್ತದೆ.

ಪರಸ್ಪರ ಒಬ್ಬರಿಗೊಬ್ಬರು ಗೌರವವನ್ನು ಕೊಟ್ಟುಕೊಂಡು ಸೋಲುವುದರಲ್ಲಿ ತಪ್ಪಿಲ್ಲ. ಒಬ್ಬರಿಗೊಬ್ಬರು ಪರಸ್ಪರ ಸೋತು ನಡೆದರೆ ಬದುಕಿನಲ್ಲಿ ಗೆಲ್ಲುತ್ತಾರೆ. ಆ ಗೆಲುವು ಉತ್ಸಾಹದ, ಸಂತಸದ ಮತ್ತು ಸಾರ್ಥಕ್ಯದ ಜೀವನಕ್ಕೆ ಕಾರಣವಾಗುತ್ತದೆ.

ಜೀವನದ ಕೊನೆಯವರೆಗೂ ಹಟ ಸಾಧಿಸಿ ಅಂತಿಮವಾಗಿ ಒಂದಾದ ಮೇಲಿನ ದಂಪತಿಗಳ ಬದುಕಿನ ಅರ್ಧ ಭಾಗ ಮುನಿಸಿನಲ್ಲಿಯೇ ಕಳೆದು ಹೋಯಿತು. ಕೈ ಜಾರುವ ಮುನ್ನ ಬದುಕನ್ನು, ಸಂಗಾತಿಯನ್ನು, ಸಮಯವನ್ನು ಪ್ರೀತಿಯನ್ನು ಹಿಡಿದಿಟ್ಟುಕೊಳ್ಳಿ. ಮತ್ತೆ ಸಿಗುವುದೋ ಇಲ್ಲವೋ ಯಾರಿಗೆ ಗೊತ್ತು! ಸಿಕ್ಕದ್ದನ್ನು ಕಳೆದುಕೊಳ್ಳುವ ಮೂರ್ಖತನ ಖಂಡಿತ ಬೇಡ.

**ಕವಿ ಮನಸು**

## ದುಡುಕಿದ ಫಲ...



ಬುದ್ಧಿ ಬಲಿಯದ ವಯಸು
ಬಿದ್ದೆನೊಲವಿನ ಬಲೆಗೆ
ನಿದ್ದೆಯಿಲ್ಲದೆ ಕಳೆದೆ ವಿರಹ ಬೇಗೆ
ಮುದ್ದು ಮಾತಿನ ಸುಳಿಗೆ
ಖುದ್ದು ಸೋತಿರಲವಗೆ
ಜಿದ್ದಿಗಿಳಿದೆನೆ ಹಡೆದ ತಂದೆ ಜೊತೆಗೆ

ಕೇಳಿ ತಂದೆಯ ನುಡಿಯ
ತಾಳಲಾರದೆ ಹೋದೆ
ಜೋಲಿಯಾಡಿತು ಮನವು ತವರು ತೊರೆದೆ
ಆಳವರಿಯದೆ ಜಿಗಿದು
ತೇಲಲಾರದೆ ಸೋತು
ಹೇಳಲಾಗದ ನೋವು ತಡೆಯದಾದೆ

ತಾಳಿ ಕಟ್ಟಿದನವನು
ಬಾಳ ಜೊತೆಯಾಗಿಹನು
ದಾಳಿಯಿಡುತಿಹನೀಗ ತಡೆವೆ ಹೇಗೆ?
ಬೇಲಿ ದಾಟಿದ ಬದುಕು
ನಾಳೆಗಿಲ್ಲದ ಕನಸು
ದಾಳವಾಗಿಹೆನವನ ಸಕಲ ನಡೆಗೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಮರೆಯಲಾಗದ ನೆನಪುಗಳು

ಸೈಕಲ್ ಕೊಳ್ಳಲಾಗದ ಪರಿಸ್ಥಿತಿ ಅಂದಿತ್ತು
ಮೋಟಾರ್ ಬೈಕ್ ಕೊಂಡಾಗ
ಖುಷಿಯಾಗಿತ್ತು
ಕಾರಲ್ಲಿ ಓಡಾಡುವವರ ಕಂಡು
ಆಸೆಯಾಗಿತ್ತು
ಕಾರು ಕೊಳ್ಳುವ ಯೋಗ ಕೂಡ ಬಂದಾಯ್ತು

ಆದರೆ ಅಂದಿನ ನೆನಪುಗಳು
ಮರೆಯಲಾಗದು
ನಡೆದಾಡುವಾಗ ಮೈ ತುಂಬಾ ಹಗುರಾಗಿತ್ತು
ಸೈಕಲ್ ಕೊಂಡಾಗ ಸ್ವಲ್ಪ ಮೈ ಬೆಳೆಯ
ಹತ್ತಿತು
ಮೋಟಾರ್ ಬೈಕ್ ಬಂದಾಗ ಹೊಟ್ಟೆ
ಬಂದಿತ್ತು

ಕಾರನ್ನು ನಡೆಸುವಾಗ ಶ್ರೀಮಂತಿಕೆ
ಹೆಚ್ಚಾಯ್ತು
ಜೊತೆಗೆ ಬಿಪಿ ಸಕ್ಕರೆ ಖಾಯಿಲೆ
ಶುರುವಾಯ್ತು
ಕಾಲ್ನಡಿಗೆ ನಡೆಯಲು ಬಹು ಕಷ್ಟವಾಯಿತು
ಮೊದಲ ದಿನಗಳ ನೆನಪಾಗಿ ಮನ
ಮರುಗಿತ್ತು

– ಕೆ ಎಂ ಬಸವರಾಜ ಹೊಸಪೇಟೆ




# ಸೂರ್ಯ ಸತ್ತರೆ........

ನಕ್ಷತ್ರಗಳಿಗೂ ಹುಟ್ಟು ಮತ್ತು ಸಾವು ಇದೆ. ಸೂರ್ಯನೂ ಇದಕ್ಕೆ ಹೊರತಲ್ಲ. ಏಕೆಂದರೆ ಸೂರ್ಯನೂ ಒಂದು ನಕ್ಷತ್ರವಲ್ಲವೇ? ಸೂರ್ಯನಿಗೆ ಹುಟ್ಟು ಇದೆ ಎಂದ ಮೇಲೆ ಸಾವೂ ಸಹ ಖಚಿತ. ಹಾಗಾದರೆ ಸೂರ್ಯನ ಸಾವು ಹೇಗಾಗುತ್ತದೆ? ಸೂರ್ಯ ಸತ್ತ ನಂತರ ಭೂಮಿಯಲ್ಲಿ ಆಗುವ ಬದಲಾವಣೆಗಳೇನು? ಎಂಬ ಪ್ರಶ್ನೆಗಳು ಎಲ್ಲರನ್ನೂ ಕಾಡುತ್ತಲೇ ಇರುತ್ತದೆ. ಆ ಎಲ್ಲಾ ಪ್ರಶ್ನೆಗಳಿಗೂ ಉತ್ತರವೇ ಈ ಬರಹ.

**ಹುಟ್ಟಿದ್ದೇ ಸಾಯಲು:** ಬಹುಶಃ ಸೂರ್ಯ ಹುಟ್ಟಿದಾಗಲೇ ಸಾವು ನಿರ್ಧಾರವಾಗಿರಬಹುದು. ಸೂರ್ಯನ ಒಟ್ಟು ವಯಸ್ಸು 10 ಶತಕೋಟಿ ವರ್ಷಗಳು ಎಂದು ಅಂದಾಜಿಸಲಾಗಿದೆ. ಸೂರ್ಯ ಈಗಾಗಲೇ ತನ್ನ ಅರ್ಧ ಆಯಸ್ಸನ್ನು ಪೂರೈಸಿದ್ದಾನೆ. ಸೂರ್ಯ ತನ್ನ ಸಾಯುವ ಸ್ಥಿತಿಯನ್ನು ತಲುಪಿದಾಗ ಏನಾಗುತ್ತದೆ ಎಂಬ ಕಾತರ ಎಲ್ಲರಲ್ಲೂ ಸಹಜ.

ಸೂರ್ಯ ಸಾಯುವ ಸ್ಥಿತಿಯನ್ನು ತಲುಪಿದಾಗ ಅದರಲ್ಲಿನ ಮೂಲ ಹೈಡ್ರೋಜನ್ ಪ್ರೋಟಾನ್–ಪ್ರೋಟಾನ್ ಎಂಬ ಪ್ರಾಥಮಿಕ ಸರಣಿಯ ಮೂಲಕ ಹೀಲಿಯಂ ಆಗಿ ಪರಿವರ್ತನೆ ಆಗುತ್ತದೆ. ಯಾವಾಗ ಹೈಡ್ರೋಜನ್ ಹೀಲಿಯಂ ಆಗಿ ಪರಿವರ್ತನೆ ಆಗಲು ಪ್ರಾರಂಭವಾಗುತ್ತದೆಯೋ ಆ ಕ್ಷಣದಿಂದ ಸೂರ್ಯ ಸಾಯಲು ಪ್ರಾರಂಭವಾಗುತ್ತದೆ. ಅದೃಷ್ಟವಶಾತ್ ಈ ಪ್ರಕ್ರಿಯೆ ಈಗಲೇ ಪ್ರಾರಂಭವಾಗಲ್ಲ. ಏಕೆಂದರೆ ಸೂರ್ಯನಿಗೆ ಇನ್ನೂ ಸಾವಿನ ವಿಮೆ(ಡೆತ್ ಪಾಲಸಿ)ಯನ್ನು ಖರೀದಿಸಲು ಆಗಿಲ್ಲ. ಐದು ಶತಕೋಟಿ ವರ್ಷಗಳ ನಂತರವಷ್ಟೇ ಈ ಪ್ರಕ್ರಿಯೆಗೆ ಚಾಲನೆ ಸಿಗಲಿದೆ. ಆದಾಗ್ಯೂ ಸೂರ್ಯ ಸಾಯುವ ವೇಳೆ ಏನಾಗುತ್ತದೆ ಎಂದು ತಿಳಿಯುವ ಕಾತರವೇ? ಮುಂದೆ ಓದಿ.

**ಗಂಭೀರವಾದ ಹಸಿರುಮನೆ ಪರಿಣಾಮ :** ಸೂರ್ಯ ಸಾಯುವ ಸ್ಥಿತಿ ತಲುಪಿದಾಗ ಹೈಡ್ರೋಜನ್‌ನ ಬಳಕೆ ಹೆಚ್ಚುತ್ತದೆ. ಆಗ ಸೂರ್ಯ ಹೆಚ್ಚು ಪ್ರಕಾಶಮಾನವಾಗಿ ಉರಿಯುತ್ತಾನೆ. ಈ ಪ್ರಕಾಶಮಾನತೆಯಿಂದ ಭೂಮಿ ಹೆಚ್ಚಿನ ಶಾಖವನ್ನು ಪಡೆಯುತ್ತದೆ. ಭೂಮಿಯ ಮೇಲೆ ಕಾರ್ಬನ್ ಡೈ ಆಕ್ಸೈಡ್, ಮೀಥೇನ್ ಮತ್ತು ನೈಟ್ರಸ್ ಆಕ್ಸೈಡ್ ಮುಂತಾದ ಅನಿಲಗಳು ನಮ್ಮ ವಾಯುಮಂಡಲಕ್ಕೆ ಹೊದಿಕೆಯಾಗುತ್ತವೆ. ಈ ಅನಿಲಗಳ ಅಗಾಧವಾದ ಶಕ್ತಿಯಿಂದ ಭೂಮಿಯು ಹೆಚ್ಚಿನ ಬಿಸಿಯನ್ನು ಪಡೆದುಕೊಳ್ಳುತ್ತದೆ. ಇದರಿಂದ ಭೂಮಿಯ ಮೇಲಿನ ನೀರು ಹೆಚ್ಚಿನ ಪ್ರಮಾಣದಲ್ಲಿ ಆವಿಯಾಗುತ್ತದೆ ಮತ್ತು ವಾತಾವರಣದಲ್ಲಿ ದಟ್ಟವಾದ ಮೋಡ ಸೃಷ್ಟಿಯಾಗುತ್ತದೆ.

ಈ ಮೋಡ ಸ್ವಲ್ಪ ಕಾಲ ಸೂರ್ಯನ ವಿಕಿರಣದಿಂದ ಭೂಮಿಯನ್ನು ರಕ್ಷಿಸುತ್ತದೆ. ಆದರೆ ಕ್ರಮೇಣವಾಗಿ ಭೂಮಿಯ ಶಾಖ ಹೆಚ್ಚುತ್ತಾ ಸಾಗುತ್ತದೆ. ಈ ಶಾಖ ಎಷ್ಟಿರುತ್ತದೆ ಎಂದರೆ ಸಾಗರಗಳ ನೀರು ಕುದಿಯುವಷ್ಟು ಇರುತ್ತದೆ ಎಂಬುದು ಆತಂಕ. ಈ ಹಂತದಲ್ಲಿ ಭೂಮಿಯ ಮೇಲೆ ಜೀವಿಗಳು ಅಸ್ತಿತ್ವದಲ್ಲಿರುವುದು ಸಾಧ್ಯವೇ ಇಲ್ಲ. ಅದನ್ನು ಮೀರಿ ಉಳಿದ ಜೀವಿ ಭವಿಷ್ಯದಲ್ಲಿ ನೀರಿನ ಕೊರತೆ ಮತ್ತು ಅತಿಯಾದ ಶಾಖವನ್ನು ಅನುಭವಿಸುವಂತಾಗುತ್ತದೆ.

**ಸೂರ್ಯನ ಗಾತ್ರ ಹೆಚ್ಚಳ :** ಸಾಮಾನ್ಯವಾಗಿ ನಕ್ಷತ್ರಗಳು ಸಾಯುವ ಸ್ಥಿತಿ ತಲುಪಿದಾಗ ಕೆಂಪು ಕುಬ್ಜ ಹಂತ ತಲುಪಿ, ಅವುಗಳ ಶಕ್ತಿ ದುರ್ಬಲಗೊಳ್ಳುತ್ತದೆ. ಆದರೆ ನಮ್ಮ ಸೂರ್ಯನಲ್ಲಿ ಇದಕ್ಕಿಂತ ಭಿನ್ನವಾದ ಪ್ರಕ್ರಿಯೆ ಜರುತ್ತದೆ. ಸೂರ್ಯ ಸಾಯುವ ವೇಳೆಗೆ ಪ್ರಕಾಶಮಾನ ಸ್ಥಿತಿ ಹೆಚ್ಚುವ ಜೊತೆಜೊತೆಗೆ ಆತನ ಗಾತ್ರವೂ ಸಹ ಹೆಚ್ಚುತ್ತದೆ. ಇದನ್ನು ಕೆಂಪುದೈತ್ಯ ಹಂತ ಎನ್ನಲಾಗುತ್ತದೆ. ಕೆಂಪುದೈತ್ಯ ಹಂತದಲ್ಲಿ ಸೂರ್ಯನ ಉಷ್ಣತೆ 2000 ದಿಂದ 3000 ಡಿಗ್ರಿ ಸೆಲ್ಸಿಯಸ್ ಇರುತ್ತದೆ. ಸೂರ್ಯನ ಮೇಲ್ಮೈ ತಾಪಮಾನ 5000 ದಿಂದ 9000 ಡಿಗ್ರಿ ಸೆಲ್ಸಿಯಸ್ ಇರುತ್ತದೆ. ಈ ಪ್ರಮಾಣಕ್ಕೆ ಹೋಲಿಸಿದರೆ ಕೆಂಪುದೈತ್ಯ ಸ್ಥಿತಿಯ ಉಷ್ಣತೆ ಕಡಿಮೆ ಎಂದೇ ಹೇಳಬಹುದು.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Hampi Times E-paper
SCAN AND READ

**ಶ್ವೇತಕುಬ್ಜ:** ಪಂಜೆ ಮಂಗೇಶರಾಯರ 'ಮೂಡುವನು ರವಿ' ಕವನದ ಕೊನೆ ಸಾಲುಗಳು ಹೀಗಿವೆ. 'ಏರುವನು ರವಿ ಏರುವನು, ಬಾನೊಳು ಸಣ್ಣಗೆ ತೋರುವನು'. ಈ ಸಾಲುಗಳು ಅಕ್ಷರಶಃ ಸೂರ್ಯನ ಅವಸಾನವನ್ನು ತಿಳಿಸುತ್ತವೆ. ಪ್ರಕಾಶಮಾನವಾಗಿ ಬೆಳಗಿದ ಸೂರ್ಯ ಗಾತ್ರದಲ್ಲಿ ಹೆಚ್ಚುತ್ತಾನೆ. ಗಾತ್ರ ಹೆಚ್ಚುತ್ತಾ ಸಾಗಿ ಕ್ರಮೇಣವಾಗಿ ಕುಗ್ಗುತ್ತಾ ಸಾಗುತ್ತದೆ. ಅಂತಿಮವಾಗಿ ಸೂರ್ಯನ ಮೂಲ ಗಾತ್ರಕ್ಕಿಂತ ಚಿಕ್ಕ ಗಾತ್ರ ಹೊಂದುತ್ತದೆ. ಇದನ್ನೇ ಶ್ವೇತ ಕುಬ್ಜ ಎನ್ನುತ್ತಾರೆ. ಆಗ ಸೂರ್ಯ ಕಡಿಮೆ ಶಕ್ತಿ ಹೊಂದಿರುತ್ತಾನೆ ಮತ್ತು ಧೀರ್ಘಾಯುಷ್ಯ ಹೊಂದುತ್ತಾನೆ. ಮುಂದೆ ಶತ ಶತಕೋಟಿ ವರ್ಷಗಳ ಕಾಳ ಬೆಳಕು ಚೆಲ್ಲಲು ಸಿದ್ದನಾಗುತ್ತಾನೆ.

ಭೂಮಿಯ ಕಕ್ಷೆ ಬದಲಾಗುತ್ತದೆ : ನಿಸ್ಸಂಶಯವಾಗಿ ಸೂರ್ಯ ಸಾಯುವ ವೇಳೆಗೆ ಭೂಮಿಯ ಮೇಲೆ ಯಾವುದೇ ಜೀವಿಗಳು ಇರುವುದಿಲ್ಲ. ಆದಾಗ್ಯೂ ಭೂಮಿ ಚಲಿಸುತ್ತಲೇ ಇರುತ್ತದೆ. ಸೂರ್ಯ ಕೆಂಪು ದೈತ್ಯ ಹಂತ ತಲುಪಿದಾಗ ಮೂರನೇ ಒಂದು ಭಾಗದಷ್ಟು ಭೂಮಿಗೆ ಹತ್ತಿರದಲ್ಲಿರುತ್ತಾನೆ. ಆಗ ಭೂಮಿಯು ಗರಿಗರಿಯಾದ ಹಾಟ್ ಚಿಪ್ಸ್‌ನಂತೆ ಬಿಸಿಬಿಸಿಯಾಗಿರುತ್ತದೆ. ಈ ಹಂತದಲ್ಲಿ ಆಶ್ಚರ್ಯಕರ ಮತ್ತು ವಿರುದ್ಧವಾದ ಪ್ರಕ್ರಿಯೆ ನಡೆಯುತ್ತದೆ.



## ಏನಾಗುತ್ತೆ ಗುರು...!

ಸೂರ್ಯನ ಭೂಮಿಯ ಸಮೀಪಕ್ಕೆ ಬರುತ್ತಿದ್ದಂತೆ ಭೂಮಿ ಮತ್ತು ಇತರ ಗ್ರಹಗಳ ಮೇಲಿನ ಗುರುತ್ವಾಕರ್ಷಣೆ ವಾಸ್ತವವಾಗಿ ದುರ್ಬಲಗೊಳ್ಳುತ್ತದೆ. ಈ ದುರ್ಬಲಗೊಳ್ಳುವಿಕೆ ಭೂಮಿಯ ಕಕ್ಷಾ ಪಥವನ್ನು ಬದಲಿಸುತ್ತದೆ.

**ಅನ್ಯ ಗ್ರಹಗಳಲ್ಲಿ ಜೀವಾಂಕುರ :** ಸೂರ್ಯ ಕೆಂಪು ದೈತ್ಯನಾಗುವ ವೇಳೆಗೆ ಭೂಮಿಯ ಮೇಲೆ ಜೀವಿಗಳು ನಾಶವಾಗುತ್ತವೆ. ಆಗ ಜೀವಗಳು ಸಂಪೂರ್ಣವಾಗಿ ನಾಶವಾದವು ಎಂದರ್ಥವಲ್ಲ. ಗುರು ಮತ್ತು ಶನಿಗಳು ಅನೇಕ ಉಪಗ್ರಹಗಳನ್ನು ಹೊಂದಿವೆ. ಆ ಗ್ರಹಗಳು ವಾಸಯೋಗ್ಯ ಗ್ರಹಗಳಾಬಹುದು. ಗುರುಗ್ರಹದ ಉಪಗ್ರಹಗಳಾದ ಯುರೋಪ ಮತ್ತು ಗ್ಯಾನಿಮಿಡಗಳು ಪ್ರಸ್ತುತ ಮಂಜುಗಡ್ಡೆ ಹೊಂದಿವೆ. ಆದರೆ ಸೂರ್ಯನ ಗಾತ್ರ ಹೆಚ್ಚಳವಾದಾಗ ಬಹುಶಃ ಆ ಮಂಜುಗಡ್ಡೆ ಕರಗಿ ನೀರಾಗುವ ಮತ್ತು ಅಲ್ಲಿ ಜೀವಾಂಕುರವಾಗುವ ಸಾಧ್ಯತೆಗಳು ಇವೆ. ಜೀವಿಗಳಿಗೆ ಸೂಕ್ತವಾದ ವಾತಾವರಣ ಸೃಷ್ಟಿಯಾಗುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

**ಗೆಲಾಕ್ಸಿಗಳ ವಿಲೀನ :** ಸೂರ್ಯನ ಮರಣದಿಂದಾಗಿ ಹೊಸ ಆಕಾಶಕಾಯ ಉಂಟಾಗುವುದಿಲ್ಲ. ಬದಲಾಗಿ ಕ್ಷೀರಪಥ ಮತ್ತು ಆಂಡ್ರೋಮಿಡಾ ಗೆಲಾಕ್ಸಿಗಳು ಪರಸ್ಪರ ಒಂದುಗೂಡುತ್ತವೆ. ಗಂಟೆಗೆ 402000 ಕಿಲೋಮೀಟರ್ ವೇಗದಲ್ಲಿ ಈ ಎರಡೂ ಗೆಲಾಕ್ಸಿಗಳು ಪರಸ್ಪರ ವೇಗಾವಗಿ ಚಲಿಸಿ ಒಂದಾಗುತ್ತವೆ. ಈ ಎರಡೂ ಬೃಹತ್ ಆಕಾಶಕಾಯಗಳು ಪರಸ್ಪರ ಒಡೆದು ಹೋಗದೇ ಒಂದಾಗುತ್ತವೆ. ವಾಸ್ತವವಾಗಿ ಸೂರ್ಯನನ್ನು ಒಳಗೊಂಡ ನಮ್ಮ ಸೌರವ್ಯೂಹ ಉತ್ತಮವಾಗಿರುತ್ತದೆ. ಅದೃಷ್ಟವಶಾತ್ ಸೂರ್ಯನ ಜೀವನಚಕ್ರ ಪೂರ್ಣಗೊಳ್ಳುವವರೆಗೂ ನಾವು ಜೀವಂತವಾಗಿದ್ದರೆ ಈ ಎರಡೂ ಗೆಲಾಕ್ಸಿಗಳು ಒಂದಾಗುವುದನ್ನು, ಅದರ ನಿವಾಸಿಗಳಂತೆ ಸುಧೀರ್ಘ ಬೆಳಕಿನ ಪ್ರದರ್ಶನವನ್ನು ಸವಿಯಬಹುದು.

**ಹೊರಗಿನ ಗ್ರಹಗಳಿಗೂ ಶಾಖದ ಅನುಭವ :** ಈಗಾಗಲೇ ಹೇಳಿದಂತೆ ಸೂರ್ಯ ಸಾಯಲು ಪ್ರಾರಂಭಿಸಿದಾಗ ಗಾತ್ರ ದೊಡ್ಡದಾಗುತ್ತದೆ ಮತ್ತು ಹೆಚ್ಚು ಪ್ರಕಾಶಮಾನವಾಗುತ್ತದೆ. ಈ ಶಾಖವು ಸೂರ್ಯನ ಸಮೀಪದ ಗ್ರಹಗಳು ಹೊತ್ತಿ ಉರಿಯುವಂತೆ ಮಾಡುತ್ತದೆ. ಅಷ್ಟೇ ಅಲ್ಲ ದೂರದ ಘನೀಕೃತ ಗ್ರಹಗಳ ಉಷ್ಣಾಂಶ ಹೆಚ್ಚಳಕ್ಕೂ ಕಾರಣವಾಗುತ್ತದೆ. ಹೊರಗಿನ ಗ್ರಹಗಳಾದ ಗುರು, ಶನಿ, ಯುರೇನಸ್ ಮತ್ತು ನೆಪ್ಚೂನ್ ಗ್ರಹಗಳಿಗೂ ಸಹ ಹೆಚ್ಚು ಶಾಖದ ಅನುಭವವಾಗುತ್ತದೆ. ಇದರಿಂದ ಆ ಗ್ರಹಗಳ ಪರಿಭ್ರಮಣೆಗಳಲ್ಲಿ ವ್ಯತ್ಯಾಸವಾಗುತ್ತದೆ.

**ಮಾನವ ಜೀವನ ಅಸಾಧ್ಯ :** ಸೂರ್ಯ ಸಾಯುವ ವೇಳೆಗೆ ಭೂಮಿಯ ಮೇಲ್ಮೈ ಶಾಖ ಅಧಿಕವಾಗುವ ಪರಿಣಾಮದಿಂದ ಭೂಮಿಯ ಮೇಲೆ ಮಾನವ ಜೀವನ ಅಸಾಧ್ಯ. ಒಂದು ವೇಳೆ ಭವಿಷ್ಯದಲ್ಲಿ ಹೊಸ ಶಾಖ ವಿರೋಧಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಕೊಂಡು ಬದುಕಿದರೂ ಸಹ ಕುಡಿಯಲು ನೀರು ಮತ್ತು ತಿನ್ನಲು ಆಹಾರ ದೊರೆಯುವುದಿಲ್ಲ. ಸೂರ್ಯ ಸಾಯುವ ವೇಳೆಗೂ ಮುನ್ನ ಬೇರೆ ಗ್ರಹಗಳಲ್ಲಿ ಮಾನವ ವಾಸ ಮಾಡಲು ಪ್ರಾರಂಭಿಸಿದರೂ ಭೂಮಿಯ ಮೇಲಿನ ಮಾನವನ ಸ್ಥಿತಿಗತಿ ಅರಿಯಲು ಸಾಧ್ಯವಿಲ್ಲ. ಏಕೆಂದರೆ ಈಗಿನ ಇಂಟರ್‌ನೆಟ್ ಸೇರಿದಂತೆ ಎಲ್ಲಾ ವ್ಯವಸ್ಥೆಗಳೂ ಅಸ್ತವ್ಯಸ್ತಗೊಳ್ಳುತ್ತವೆ.

**ಕ್ಷುದ್ರಗ್ರಹಗಳು ಮಾಯ :** ಸೂರ್ಯ ಸಾಯುವಾಗಿನ ಬಿಸಿ ಇಡೀ ನಮ್ಮ ಸೌರವ್ಯೂಹದ ಗ್ರಹಗಳ ಮೇಲೆ ಪರಿಣಾಮ ಬೀರುತ್ತದೆ. ಸೂರ್ಯನ ತೀವ್ರಗಾಮಿ ಶಾಖವು ಗುರುಗ್ರಹದ ದ್ರವ್ಯರಾಶಿ ಹೆಚ್ಚಳಕ್ಕೆ ಕಾರಣವಾಗುತ್ತದೆ. ಅಂತೆಯೇ ಮಂಗಳ ಮತ್ತು ಗುರು ಗ್ರಹದ ನಡುವಿನ ಕ್ಷುದ್ರಗ್ರಹಗಳು ಸೂರ್ಯನ ಶಾಖಕ್ಕೆ ಮಾಯವಾಗುತ್ತವೆ. ಅವು ಶ್ವತಕುಬ್ಜದ ಕಡೆಗೆ ನೂಕಲ್ಪಡಬಹುದು ಅಥವಾ ಅವುಗಳು ಶಾಖಕ್ಕೆ ಚೂರುಚೂರಾಗಬಹುದು.

**ಅನ್ಯ ವಾಸಸ್ಥಳದ ಹುಡುಕಾಟ :** ಸೂರ್ಯ ಸಾಯುವ ಸಮಯಕ್ಕೆ ನಾವು ಯಾವ ತಂತ್ರಜ್ಞಾನವನ್ನು ಹೊಂದಬೇಕೆಂದು ನಿಖರವಾಗಿ ಊಹಿಸುವುದು ಕಷ್ಟ. ಆದರೆ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಈಗಾಗಲೇ ದೂರದ ಗ್ರಹಗಳಿಗೆ ಪ್ರಯಾಣ ಬೆಳೆಸಿದ್ದೇವೆ. ವಾಸಯೋಗ್ಯ ಗ್ರಹಗಳನ್ನು ಅರಸಿ ಹೊರಟಿದ್ದೇವೆ. 2030ರ ವೇಳೆಗೆ ಮಂಗಳನ ಅಂಗಳದಲ್ಲಿ ಮಾನವ ಜೀವನ ಪ್ರಾರಂಭಿಸುವ ಯೋಜನೆ ಇದೆ. ಹೊಸ ಗೆಲಾಕ್ಸಿಗಳತ್ತ ಹೊರಟ ನಮ್ಮ ಪಯಣ ಮಂಗಳನ ಅಂಗಳಕ್ಕೆ ಹೋಗುವುದು ದೊಡ್ಡದೇನಲ್ಲ. ನೀಲ್‌ಆರ್ಮ್‌ಸ್ಟ್ರಾಂಗ್ ಚಂದ್ರನ ಮೇಲೆ ಕಾಲಿಟ್ಟಾಗ "ಮಾನವನಿಗೆ ಇದು ಸಣ್ಣ ಹೆಜ್ಜೆ, ಆದರೆ ಮನುಕುಲಕ್ಕೆ ದೈತ್ಯ ಹೆಜ್ಜೆ" ಎಂದು ಹೇಳಿದ ಮಾತು ಅಕ್ಷರಶಃ ಸತ್ಯವಾಗಿದೆ. ಈ ಹಿಂದೆ ಭೂಮಿಗೆ ಬರುವ ಗಂಡಾಂತರಗಳನ್ನು ಅರಿತು ಅದನ್ನು ತಪ್ಪಿಸಲು ಪ್ರಯತ್ನಿಸಿದ್ದೇವೆ. ನಮ್ಮ ಪಕ್ಕದ ಗ್ರಹಗಳನ್ನು ಮಾತ್ರ ತೋರಿಸಲು ಶಕ್ತವಾಗಿದ್ದ ದೂರದರ್ಶಕಗಳ ಸಾಮರ್ಥ್ಯ ಈಗ ಬ್ರಹ್ಮಾಂಡಗಳ ಆಚೆ ವಿಸ್ತರಿಸಿದೆ. ಹಾಗಾಗಿ ಭವಿಷಯದಲ್ಲಿ ಏನಾಗುತ್ತದೆಂದು ಅರಿಯುವ ಎಲ್ಲಾ ಸಾಧ್ಯತೆಗಳು ಲಭ್ಯವಾಗುತ್ತವೆ. ಅದಕ್ಕೆ ತಕ್ಕದಾದ ಪ್ರತಿತಂತ್ರಗಳನ್ನು ರೂಪಿಸಿಕೊಂಡು ಬೇರೆ ಗ್ರಹಗಳತ್ತ ಮುಖಮಾಡುವ ದಿನಗಳು ದೂರವಿಲ್ಲ.

# ಮುನಿರಾಬಾದ್ ಟು ತೋರಣಗಲ್ ಮಾನವ ಸರಪಳಿ

## ಪ್ರೌಢಶಾಲೆ, ಕಾಲೇಜ್ ಮತ್ತು ವಿದ್ಯಾರ್ಥಿನಿಲಯಗಳಿಂದ ಮಕ್ಕಳನ್ನು ಕರೆ ತರಲು ಕನಿಷ್ಠ 100 ಬಸ್ಸುಗಳ ವ್ಯವಸ್ಥೆ

**ಮೊದಲ ಪುಟದಿಂದ**

ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಅಂತಾರಾಷ್ಟ್ರೀಯ ಪ್ರಜಾ ಪ್ರಭುತ್ವ ದಿನದ ಅಂಗವಾಗಿ ಬೀದರ್‌ನಿಂದ ಚಾಮರಾಜನಗರದವರೆಗೆ ಬೃಹತ್ ಮಾನವ ಸರಪಳಿ ನಿರ್ಮಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಮಾನವ ಸರಪಳಿ ನಿರ್ಮಿಸುವ ಮೂಲಕ ಪ್ರಜಾಪ್ರಭುತ್ವದ ಮೌಲ್ಯಗಳನ್ನು ದಾರಿಯುದ್ದಕ್ಕೂ ಪಸರಿಸುವ ಉದ್ದೇಶ ಹೊಂದಿದೆ. ಈ ನಿಮಿತ್ತ ವಿಜಯನಗರ ಜಿಲ್ಲೆಯಲ್ಲಿ ನಡೆಯುವ ಮಾನವ ಸರಪಳಿ ಕಾರ್ಯಕ್ರಮಕ್ಕೆ ಜಿಲ್ಲೆಯ ಜನತೆ ಕೈಜೋಡಿಸಬೇಕು ಎಂದು ಜಿಲ್ಲಾಧಿಕಾರಿಗಳು ಸಭೆಯ ಮೂಲಕ ಸಾರ್ವಜನಿಕರಲ್ಲಿ ಮನವಿ ಮಾಡಿದರು. ಸಮಾಜ ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳು ಮತ್ತು ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಮಾನವ ಸರಪಳಿ ನಿರ್ಮಿಸುವ ಮೂಲಕ ಸಂವಿಧಾನದ ಗೌರವ, ಘನತೆ ಹೆಚ್ಚಿಸುವ ಮತ್ತು ಸಾಂಸ್ಕೃತಿಕ ಮಹತ್ವ ಸಾರಿ ಹೇಳುವಂತಹ ಮಾನವ ಸರಪಳಿಯನ್ನು ರಚಿಸಿ ಯಶಸ್ವಿಗೊಳಿಸಬೇಕು. ಯಾವುದೇ ಲೋಪ ಆಗದಂತೆ ಅವಶ್ಯಕ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಈ ಕಾರ್ಯಕ್ರಮದ ಯಶಸ್ವಿಗಾಗಿ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗುತ್ತಿದೆ. ಪ್ರತಿ 1 ಕಿ.ಮೀ. ವ್ಯಾಪ್ತಿಗೆ ತಾಲೂಕು ಮಟ್ಟದ ಅಧಿಕಾರಿಗಳನ್ನು ಮತ್ತು ಪ್ರತಿ 3 ಕಿ.ಮೀ ವ್ಯಾಪ್ತಿಗೆ ಒಬ್ಬರಂತೆ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗುತ್ತದೆ ಎಂದು ತಿಳಿಸಿದರು.

ಮಾನವ ಸರಪಳಿ ಸಾಗುವ ದಾರಿಯಲ್ಲಿನ ಗ್ರಾಮ ಪಂಚಾಯಿತಿಗಳ ಪಿ.ಡಿ.ಓ ಗಳನ್ನು ಏರಿಯಾ ಆಫೀಸರ್‌ಗಳನ್ನಾಗಿ ನೇಮಿಸಲಾಗುವುದು ಹಾಗೂ ಗ್ರಾಮಗಳಲ್ಲಿನ ಗ್ರಾಮ ಆಡಳಿತ ಅಧಿಕಾರಿಗಳು ಮತ್ತು ಕಂದಾಯ ನೀರಿಕ್ಷಕರನ್ನು ಗ್ರಾಮ ಉಸ್ತುವಾರಿಗಳನ್ನಾಗಿ ನೇಮಿಸಲಾಗುವುದು ಎಂದು ತಿಳಿಸಿದರು. ಮಾನವ ಸರಪಳಿ ರಚನೆ ವೇಳೆ ಸಾರ್ವಜನಿಕರ ಆರೋಗ್ಯ ಹಿತದೃಷ್ಟಿಯಿಂದ ಆರೋಗ್ಯ ಇಲಾಖೆಯಿಂದ ನುರಿತ ಸಿಬ್ಬಂದಿ ಸಹಿತ ಚಿಕಿತ್ಸಾ ಸೌಲಭ್ಯ ಇರುವ ಆಂಬುಲೆನ್ಸ್ ವ್ಯವಸ್ಥೆ ಮಾಡಬೇಕು. ಪೊಲೀಸ್ ಇಲಾಖೆಯಿಂದ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಆಗಬೇಕು.

ಪ್ರೌಢಶಾಲೆ, ಕಾಲೇಜ್ ಮತ್ತು ವಿದ್ಯಾರ್ಥಿನಿಲಯಗಳಿಂದ ಮಕ್ಕಳನ್ನು ಕರೆ ತರಲು ಕನಿಷ್ಠ 100 ಬಸ್ಸುಗಳ ವ್ಯವಸ್ಥೆಯನ್ನು ಸಾರಿಗೆ ಇಲಾಖೆಯ ಅಧಿಕಾರಿಗಳು ಮಾಡಬೇಕು ಎಂದು ಹೇಳಿದರು.

ರೂಟ್ ಮ್ಯಾಪ್ ಗ್ರಾಮಗಳು: ಮುನಿರಾಬಾದ್, ಟಿ.ಬಿ.ಡ್ಯಾಂ ಗಣೇಶ ದೇವಸ್ಥಾನ, ಸಾಯಿಬಾಬಾ ದೇವಸ್ಥಾನ, ಸಿದ್ಧಿಪ್ರಿಯಾ ಕಲ್ಯಾಣ ಮಂಟಪ, ಕೇಂದ್ರ ಬಸ್ ನಿಲ್ದಾಣ, ಪುಣ್ಯಮೂರ್ತಿ ಸರ್ಕಲ್, ಬಸ್ ಡಿಪೋ, ಬಳ್ಳಾರಿ ರೋಡ್, ಹೆಚ್‌ಸಿಎಲ್ ಕಾಲುವೆ, ಕಾರಿಗನೂರು, ವಡ್ಡರಹಳ್ಳಿ, ಪಾಪಿನಾಯಕನಹಳ್ಳಿ, ಬಯಲುವದ್ದಿಗೆರಿ, ಧರ್ಮಸಾಗರ, ಗಾದಿಗನೂರು ಮಾರ್ಗವಾಗಿ ತೋರಣಗಲ್ಲವರೆಗೆ ಒಟ್ಟು 49 ಕಿ.ಮೀವರೆಗೆ ಮಾನವ ಸರಪಳಿ ರಚನೆ ಮಾಡಲು ಸಿದ್ದತೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನೊಂಗ್ಜಾಯ್ ಮಹಮ್ಮದ್ ಅಲಿ ಅಕ್ರಮ ಷಾಹ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ್ ಹೆಚ್.ಎಸ್., ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಶರಣಪ್ಪ ಮುದುಗಲ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ರಾಮಚಂದ್ರಪ್ಪ ಕೆ.ಬಿ., ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರಾದ ಪ್ರಭುಲಿಂಗ ಎಸ್. ತಳಿಕೆರೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಶ್ರಾವಣ । ಸಂವತ್ಸರ: ಕ್ರೋಧಿ

**31-08-2024 – ಶನಿವಾರ**

| | |
|---|---|
| ತಿಥಿ | : ತ್ರಯೋದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪುಷ್ಯ |
| ಯೋಗ | : ವರಿಯಾಣ |
| ಕರಣ | : ಗರಜ |
| ಸೂರ್ಯೋದಯ | : 06:09:50 |
| ಸೂರ್ಯಾಸ್ತ | : 18:43:53 |
| ರಾಹು ಕಾಲ | : 09:18–10:53 |
| ಯಮಘಂಡ ಕಾಲ | : 14:01–15:35 |
| ಗುಳಿಕ ಕಾಲ | : 06:10–07:44 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 30-08-2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.56 ಅಡಿ |
| ಒಳ ಹರಿವು | 34083 ಕ್ಯುಸೆಕ್ |
| ಹೊರ ಹರಿವು | 10067 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 92.424 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1625.40 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 7659 ಕ್ಯುಸೆಕ್ |
| ಸಾಮರ್ಥ್ಯ | 77.808 ಟಿಎಂಸಿ |

# ಜನರ ನಿರೀಕ್ಷೆಯಂತೆ ಕೆಲಸ ಮಾಡುವೆ

**ಪ.ಪಂ.ಅಧ್ಯಕ್ಷ ಶಿವಪ್ಪನಾಯಕ ಹೇಳಿಕೆ । 24/7 ಕುಡಿಯುವ ನೀರು । ಯುಜಿಡಿ ಕಾಮಗಾರಿ । ಭೂದಾನಿ ಪುತ್ಥಳಿ ನಿರ್ಮಾಣ**



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಸುಂದರ ಹಾಗೂ ಸ್ವಚ್ಛ ಪಟ್ಟಣದ ಜತೆ ಮೂಲ ಸೌಕರ್ಯಗಳನ್ನು ಒದಗಿಸುವುದೇ ನನ್ನ ಮೊದಲ ಗುರಿ ಅದಕ್ಕೆ ಪೂರಕವಾಗಿ ಸರ್ವರ ಸಹಕಾರ ಅಗತ್ಯ ಎಂದು ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ ಮನವಿ ಮಾಡಿದರು. ಪಟ್ಟಣದ ಪಪಂ ಸಭಾಂಗಣದಲ್ಲಿ ಶುಕ್ರವಾರ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪಟ್ಟಣದ 20 ವಾರ್ಡುಗಳಲ್ಲಿ ಮೊದಲ ಆದ್ಯತೆಯಾಗಿ ಕುಡಿಯುವ ನೀರು, ಸ್ವಚ್ಛತೆ ಸೇರಿದಂತೆ ಮೂಲ ಸೌಕರ್ಯಗಳನ್ನು ಒದಗಿಸಬೇಕಿದೆ. ಜನರು ನಮ್ಮ ಮೇಲೆ ನಿರೀಕ್ಷೆ ಇಟ್ಟಿದ್ದಾರೆ ಅದಕ್ಕಾಗಿ ಸರ್ವ ಸದಸ್ಯರು ಹಾಗೂ ಪಪಂ ಅಧಿಕಾರಿಗಳು ಜವಾಬ್ದಾರಿ ಅರಿತು ಕೆಲಸ ಮಾಡಬೇಕಿದೆ ಎಂದರು. ಈಗಾಗಲೇ ಶಾಸಕ ಡಾ. ಎನ್.ಟಿ.ಶ್ರೀನಿವಾಸ್ ಅವರು ಸಹ ತಮ್ಮ ದೂರದೃಷ್ಟಿ ಯೋಜನೆಯಂತೆ ಮುಂದಿನ 30 ವರ್ಷಗಳ ವರೆಗೂ ದಿನದ 24 ತಾಸು ಕುಡಿಯುವ ನೀರು ಲಭ್ಯವಾಗಲು ಅಂದಾಜು 65 ಕೋಟಿ ಅನುದಾನ ನೀಡಿ ಪಟ್ಟಣಕ್ಕೆ ಪಾವಗಡ ಕುಡಿಯುವ ನೀರಿನ ಯೋಜನೆಗೆ ಕೂಡ್ಲಿಗಿ ಪಟ್ಟಣವನ್ನು ಒಳಪಡಿಸಿದ್ದು ಸಂತಸದ ವಿಷಯ ಎಂದರು. ಅದರಂತೆ ಪಟ್ಟಣದ ಯುಜಿಡಿ ಕಾಮಗಾರಿ ಇನ್ನು ಸ್ವಲ್ಪ ಬಾಕಿ ಉಳಿದಿದ್ದು ಅದನ್ನು ಪೂರ್ಣಗೊಳಿಸಲು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಕಾಳಜಿ ವಹಿಸಿ ಅನುದಾನ ಬಿಡುಗಡೆ ಗೊಳಿಸಿದ್ದು, ಇನ್ನು ಬಿಟ್ಟಿರುವ ಯುಜಿಡಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಿಯಾಯೋಜನೆ ರೂಪಿಸಲಾಗುವುದು ಎಂದು ತಿಳಿಸಿದರು. 13 ನೇ ವಾರ್ಡ್ ಪಪಂ ಸದಸ್ಯ ಪಿ.ಚಂದ್ರು ಮಾತನಾಡಿ, ಕಳೆದ ಸಭೆಯಲ್ಲಿ ಚರ್ಚೆ ಮಾಡಿದಂತೆ ಪಟ್ಟಣದ ಅಂಗಡಿ ವೀರಮ್ಮ,ತಿರುಕಪ್ಪ ಸರ್ಕಾರಿ ಪದವಿ ಕಾಲೇಜಿನಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ 7.30 ಎಕರೆ ಜಮೀನು ನೀಡಿರುವ ದಾನಿಗಳ ಪುತ್ಥಳಿ ನಿರ್ಮಾಣಕ್ಕೆ ಈಗಾಗಲೇ ಸರ್ವ ಸದಸ್ಯರು ಒಪ್ಪಿಗೆ ನೀಡಿದ್ದರು ಕಾರ್ಯರೂಪಕ್ಕೆ ಬಂದಿಲ್ಲ ಈಗಾದರೆ ಹೇಗೆ ಎಂದು ಸಭೆಯಲ್ಲಿ ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಮುಖ್ಯಾಧಿಕಾರಿ ಎಂ.ಕೆ.ಮುಗಳಿ, ನಾನು ಹೊಸದಾಗಿ ಬಂದಿದ್ದು, ಹಿಂದಿನ ಕಡತ ಪರಿಶೀಲನೆ ನಡೆಸಿ ಕ್ರಮವಹಿಸುವುದಾಗಿ ತಿಳಿಸಿದರು, ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ ಧ್ವನಿಗೂಡಿಸಿ ಬೆಲೆ ಬಾಳುವ ಜಮೀನು ನೀಡಿರುವ ದಾನಿಗಳ ಪುತ್ಥಳಿ ನಿರ್ಮಾಣಕ್ಕೆ ಮೊದಲ ಆದ್ಯತೆ ನೀಡುವುದಾಗಿ ತಿಳಿಸಿ ಆದಷ್ಟು ಶೀಘ್ರವಾಗಿ ಬೇಕಾದ ಅನುದಾನ ನೀಡಲು ಸಭೆಗೆ ತಿಳಿಸಿದರು. ಪಟ್ಟಣದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು ಅದಕ್ಕೆ ಕಡಿವಾಣ ಹಾಕಲು ಸದಸ್ಯ ಪಿ.ಚಂದ್ರು ತಿಳಿಸಿದರು. ಈಗಾಗಲೇ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ನಾಯಿಗಳ ಉಪಟಳ ತಪ್ಪಿಸುವುದಾಗಿ ಮುಖ್ಯಾಧಿಕಾರಿ ಎಂ.ಕೆ. ಮುಗಳಿ ತಿಳಿಸಿದರು. ಉಳಿದಂತೆ ಶುದ್ಧ ಕುಡಿಯುವ ನೀರಿನ ಘಟಕದ ನಿರ್ವಹಣೆ ಹಾಗೂ ಯುಜಿಡಿ ನಿರ್ವಹಣೆ ಸೇರಿದಂತೆ ನೀರು ಸರಬರಾಜು ಮಾಡುವ ಹೊರ ಗುತ್ತಿಗೆ ನೌಕರರಿಗೆ ವೇತನ ನೀಡಲು ಸಭೆಯಲ್ಲಿ ಚರ್ಚೆಯಾಯಿತು. ಇದೇ ಸಂಧರ್ಭದಲ್ಲಿ ಸ್ಥಾಯಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡಿ, ಸ್ಥಾಯಿ ಸಮಿತಿ ಅಧ್ಯಕ್ಷರನ್ನಾಗಿ ಸದಸ್ಯಸಯ್ಯದ್ ಶುಕೂರ್ ಅವರನ್ನುಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಪಪಂ ಉಪಾಧ್ಯಕ್ಷೆ ಲೀಲಾವತಿ ಪ್ರಭಾಕರ, ನಗರ ನೀರು ಮತ್ತು ನೈರ್ಮಲ್ಯ ಇಲಾಖೆ ಎಇಇ ಮಲ್ಲಿಕಾರ್ಜುನ ಪಾಟೀಲ್, ಮುಖ್ಯಾಧಿಕಾರಿ ಎಂ.ಕೆ.ಮುಗಳಿ, ಸದಸ್ಯರಾದ ಲಕ್ಷ್ಮೀದೇವಿ, ಥಾಣಿ ಚೌಡಮ್ಮ, ಸರಸ್ವತಿ ರಮೇಶ್, ಪೂರ್ಯಾ ನಾಯ್ಕ್ ಸೇರಿದಂತೆ ಅನೇಕರು ಇದ್ದರು.

## ಬಳ್ಳಾರಿ ಮಹಾನಗರ ಪಾಲಿಕೆ ಆಸ್ತಿ ತೆರಿಗೆ ಪಾವತಿ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ಆಸ್ತಿ ತೆರಿಗೆದಾರರು ತಮ್ಮ ಆಸ್ತಿಯ ತೆರಿಗೆ ಪಾವತಿ ಮಾಡಲು ಶೇ.5 ರಷ್ಟು ರಿಯಾಯಿತಿ ನೀಡಲು ಕಲ್ಪಿಸಿರುವ ಅವಕಾಶದ ಅವಧಿಯನ್ನು ಸೆ.14 ರವರೆಗೆ ವಿಸ್ತರಿಸಲಾಗಿದೆ. ಆಸ್ತಿ ತೆರಿಗೆ ಪಾವತಿಯನ್ನು ಪರಿಣಾಮಕಾರಿಯಾಗಿ ಹೆಚ್ಚಿಸಲು ಹಾಗೂ ಸ್ವಯಂ ತೆರಿಗೆ ಪಾವತಿಯನ್ನು ಉತ್ತೇಜಿಸಲು ಬಳ್ಳಾರಿ ಮಹಾನಗರ ಪಾಲಿಕೆ ಯಲ್ಲಿ ಆರ್ಥಿಕ ವರ್ಷದ ಪ್ರಾರಂಭದ 30 ದಿನಗಳಲ್ಲಿ ಪೂರ್ಣ ಪ್ರಮಾಣದ ಆಸ್ತಿ ತೆರಿಗೆ ಪಾವತಿ ಮಾಡಿದಲ್ಲಿ ಶೇ.5 ರಷ್ಟು ರಿಯಾಯಿತಿ ನೀಡಲಾಗುವುದು. ಆಸ್ತಿ ತೆರಿಗೆದಾರರು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಬಳ್ಳಾರಿ ಮಹಾನಗರ ಪಾಲಿಕೆ ತಿಳಿಸಿದೆ.

**IN THE COURT OF THE ADDL. CIVIL JUDGE AND JMFC AT HOSAPETE**
**Cri M.C.No.120/2024**

S.R. Swaminathan .....Petitioner
Versus
Commissioner cum Registrar birth and death CMC Hosapete .....Respondent

To, Whom so ever it may concern,

WHEREAS the above name S.R. Swamynathan son of Ramaswamy of Hosapete Hosapete taluk filed the above petition under section 13(3) of birth and death registration Act for obtaining death certificate of his father Ramaswamy son of perumal Bovi expired on 13.08.1980 at 14th ward Dress Camp T.B. Dam Hosapete, Hosapete taluk Vijayanagar District.
WHEREAS, If any person/s interested with respect to the above matter is/are hereby noticed to appear in this Court in person or by a Pleader duly instructed, and able to answer all such questions, on the day of 21/9/2024 at 11.00 O clock in the noon, to answer the petition as on the day fixed, otherwise the petition will be disposed in your absence.
Given under my hand and the seal of the Court, this 30th day of August 2024

By order of the court
**CHIEF MINISTERIAL OFFICER**
**ADDL CIVIL JUDGE AND JMFC COURT**
**HOSAPETE**

**L.S. Ananda, Advocate, Hosapete**

# ಎನಿವೇರ್ ನೋಂದಣಿ ವ್ಯವಸ್ಥೆ ವಿಜಯನಗರ ಜಿಲ್ಲೆಗೂ ವಿಸ್ತರಣೆ: ಡಿಸಿ

■ **ಹಂಪಿ ಟೈಮ್ಸ್ ಹೊಸಪೇಟೆ**

2024-25ಸಾಲಿನ ಆಯವ್ಯಯ ಭಾಷಣದಲ್ಲಿ ಎನಿ ವೇರ್ (any where) ನೋಂದಣಿ ವ್ಯವಸ್ಥೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲಾಗುವುದೆಂದು ಸರ್ಕಾರದಿಂದ ಘೋಷಿಸಲಾಗಿದೆ.

ವಿಜಯನಗರ ಜಿಲ್ಲೆ ಎಲ್ಲಾ ಉಪನೋಂದಣಿ ಕಚೇರಿಗಳಿಗೂ ವಿಸ್ತರಿಸಲು ನಿರ್ಧರಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಪ್ರಸ್ತುತ ಸಾರ್ವಜನಿಕರು ಸ್ಥಿರಾಸ್ತಿ ಇರುವ ವ್ಯಾಪ್ತಿಯ ಉಪನೋಂದಣಿ ಕಚೇರಿಯಲ್ಲಿ ಮಾತ್ರ ದಸ್ತಾವೇಜನ್ನು ನೋಂದಣಿ ಮಾಡಲು ಅವಕಾಶವಿದ್ದು, ಆದರೆ ಎನಿ ವೇರ್ ನೋಂದಣಿಯಲ್ಲಿ ದಸ್ತಾವೇಜನ್ನು ಸ್ಥಿರಾಸ್ತಿ ಇರುವ ಜಿಲ್ಲೆಯ ಯಾವುದಾದರೂ ಉಪನೋಂದಣಿ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬಹುದಾಗಿದೆ.

ಸಾರ್ವಜನಿಕರು ಎನಿ ವೇರ್ ನೋಂದಣಿಯ ಸದುಪಯೋಗ ಪಡಿಸಿಕೊಂಡು ತಮಗೆ ಹತ್ತಿರದ ಅಥವಾ ನೋಂದಣಿಗೆ ಸ್ಲಾಟ್ ಲಭ್ಯವಿರುವಂತಹ ಕಚೇರಿ ಆಯ್ಕೆ ಮಾಡಿಕೊಂಡು ದಸ್ತಾವೇಜನ್ನು ನೋಂದಾಯಿಸಿಕೊಳ್ಳಲು ತಿಳಿಸಿದೆ ಎಂದು ಜಿಲ್ಲಾಧಿಕಾರಿಗಳ ಕಚೇರಿಯ ಪ್ರಕಟಣೆ ತಿಳಿಸಿದೆ.

ಉದಾಹರಣೆಗೆ ಹೊಸಪೇಟೆ ನಗರದ ಆಸ್ತಿಯನ್ನು ಮಾರಾಟ ಅಥವಾ ಖರೀದಿ ಮಾಡಲು ಜಿಲ್ಲೆಯ ಕೂಡ್ಲಿಗಿ ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ, ಹಡಗಲಿ ತಾಲೂಕುಗಳ ಯಾವುದೇ ಉಪ ನೊಂದಣಿ ಕಚೇರಿಗಳಲ್ಲಿ ಆಸ್ತಿ ನೊಂದಣಿ ಪ್ರಕ್ರಿಯೆ ಮಾಡಿಕೊಳ್ಳಬಹುದಾಗಿರುತ್ತದೆ ಎಂದು ಅವರು ಎನಿ ವೇರ್ (ಚಿಟಥಿ ಷಿಜಡಿಜ) ನೋಂದಣಿ ವ್ಯವಸ್ಥೆಯ ಬಗ್ಗೆ ಮಾಹಿತಿ ನೀಡಿದ್ದಾರೆ.

# ತಂಬಾಕು ನಿಯಂತ್ರಣ ಕೋಶದಿಂದ ಕಾರ್ಯಾಚರಣೆ

■ **ಹಂಪಿ ಟೈಮ್ಸ್ ಬಳ್ಳಾರಿ**



ಸಂಡೂರು ತಾಲೂಕಿನ ತೋರಣಗಲ್ಲು ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಅಂಗಡಿಗಳ ಮೇಲೆ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಮಾರ್ಗ ದರ್ಶನದಂತೆ, ತಂಬಾಕು ನಿಯಂತ್ರಣ ಕೋಶದ ವತಿಯಿಂದ ಕಾರ್ಯಾಚರಣೆ ನಡೆಸಿ ಕೋಟ್ಪಾ ಕಾಯಿದೆ 2003ರ ಉಲ್ಲಂಘನೆ ಮಾಡಿ ಮಾರಾಟ ಮಾಡುತ್ತಿದ್ದ 20 ಅಂಗಡಿಗಳ ಮೇಲೆ ದಾಳಿ ಮಾಡಿ ದಂಡ ವಿಧಿಸಲಾಯಿತು.

ಬಳಿಕ ಕೋಟ್ಪಾ ಕಾಯ್ದೆ 2003 ಹಾಗೂ ತಂಬಾಕು ಸೇವನೆಯಿಂದ ಆಗುವ ದುಷ್ಪರಿಣಾಮದ ಕುರಿತು ತಂಬಾಕು ಮಾರಾಟಗಾರರಿಗೆ ಅರಿವು ಮೂಡಿಸಲಾಯಿತು. ಈ ವೇಳೆ ಹಿರಿಯ ಆರೋಗ್ಯ ನಿರೀಕ್ಷಕ ಗೋವಿಂದಪ್ಪ, ಜಿಲ್ಲಾ ತಂಬಾಕು ಸಲಹೆಗಾರ ರಾದ ಪ್ರಶಾಂತ್, ಆಪ್ತ ಸಮಲೋಚಕ ಯಂಕಪ್ಪ, ಪೊಲೀಸ್ ಸಿಬ್ಬಂದಿ ಫಕ್ಕೀರಪ್ಪ ಹಾಗೂ ಸಮಾಜ ಕಾರ್ಯಕರ್ತೆ ಸರಸ್ವತಿ ಇದ್ದರು.

# ಬೀದಿ ಬದಿ ಆಹಾರದಲ್ಲಿ ಕಲಬೆರಕೆ ಕ್ಯಾನ್ಸರ್ ಭೀತಿ

■ **ಹಂಪಿ ಟೈಮ್ಸ್ ಕೂಡ್ಲಿಗಿ**

ಕಳಪೆ ಗುಣಮಟ್ಟದ ಆಹಾರ ಸೇವನೆ ಜನರ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ಜನ ಸಾಮಾನ್ಯರ ಆರೋಗ್ಯ ದೃಷ್ಟಿಯಿಂದ ಹಾನಿಕಾರಕ ಆಹಾರದ ಬಗ್ಗೆ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ ಎಂದು ಆಹಾರ ಸುರಕ್ಷತಾಧಿಕಾರಿ ಉದಯ್ ಮುದ್ದೆಬಿಹಾಳ ತಿಳಿಸಿದರು. ಪಟ್ಟಣದ ಪಾದಗಟ್ಟೆ ವೃತ್ತದಲ್ಲಿ ಬೀದಿ ಬದಿಯಲ್ಲಿ ತಯಾರಿಸುವ ಆಹಾರದ ಅಂಗಡಿಗಳ ಮೇಲೆ ದಾಳಿ ನಡೆಸಿ ಮಾತನಾಡಿದರು. ಬೀದಿ ಬದಿಯಲ್ಲಿ ಮಾಡುವ ತಿಂಡಿ, ತಿನಿಸುಗಳಲ್ಲಿ ಟೆಸ್ಟಿಂಗ್ ಪೌಡರ್ ಹಾಗೂ ಕೃತಕ ಬಣ್ಣಗಳನ್ನು ಹಾಕಿ ಆಹಾರ ತಯಾರಿಸುತ್ತಾರೆ. ಇದರಿಂದ ಜನರ ಕಿಡ್ನಿ ಸೇರಿದಂತೆ ಕ್ಯಾನ್ಸರ್ ರೋಗ ಬರುವುದು ಹೆಚ್ಚಾಗಿದೆ. ಅಲ್ಲದೆ ಬಹುತೇಕ ಅಂಗಡಿಗಳಲ್ಲಿ ಆಹಾರವನ್ನು ತೆರೆದೆ ಇಟ್ಟಿರುತ್ತಾರೆ ಇದರಿಂದ ಹಲವು ಬಗೆಯ ಸಾಂಕ್ರಾಮಿಕ ರೋಗಗಳು ಬರುವ ಅಪಾಯ ಇದೆ ಎಂದರು. ಆದ್ದರಿಂದ ಆಹಾರ ತಯಾರಿಸುವ ಎಲ್ಲಾ ಅಂಗಡಿಗಳ ಮೇಲೆ ದಾಳಿ ನಡೆಸಿ ಆಹಾರದ ಮಾದರಿಯನ್ನು ಸಂಗ್ರಹಿಸಿ ಅದನ್ನು ಪರೀಕ್ಷೆ ಮಾಡಲಾಗುವುದು. ಹಾನಿಕಾರಕ ಅಂಶ ಕಂಡು ಬಂದಲ್ಲಿ ನೋಟಿಸ್ ನೀಡಿ ಕೇಸ್ ದಾಖಲಿಸಲಾಗುವುದು ಎಂದು ತಿಳಿಸಿದರು. ಇದೇ ಸಂಧರ್ಭದಲ್ಲಿ ಪಟ್ಟಣದ ಚಿಕನ್, ಎಗ್ ರೈಸ್ ಹಾಗೂ ಗೋಬಿ ಅಂಗಡಿಗಳ ಮೇಲೆ ದಾಳಿ ನಡೆಸಿ ಅವರಿಗೆ ಆಹಾರದ ಸುರಕ್ಷತೆ ಹಾಗೂ ಬಳಕೆ ಮಾಡಬಹುದಾದ ಪದಾರ್ಥಗಳ ಬಗ್ಗೆ ಮಾಹಿತಿ ನೀಡಿದರು.

**ಶ್ರೀ ಬಂಡೆರಂಗನಾಥ ಸೌಹಾರ್ದ ಪತ್ತಿನ ಸಹಕಾರಿ ಸಂಘ, ನಿ.**

6-95/08, ರೈಲ್ವೆಗೇಟ್ ಎಸ್.ಬಿ.ಐ.ಹಿಂಭಾಗ, ವಿನಾಯಕ ಖಾನಾವಳಿ ಹಿಂದೆ. 16ನೇ ವಾರ್ಡ್ ಕೆ.ವಿ.ಓ.ಆರ್ ಕಾಲೋನಿ. ಹಗರಿಬೊಮ್ಮನಹಳ್ಳಿ ತಾಲೂಕು-583212, ವಿಜಯನಗರ ಜಿಲ್ಲೆ. ಫೋ:9036815789

**ಪತ್ರಿಕಾ ಪ್ರಕಟಣೆ**

**2023-24ನೇ ಸಾಲಿನ ಸಾಮಾನ್ಯ ಸಭೆ ಸೂಚನಾ ಪತ್ರ**

ನಮ್ಮ ಸಹಕಾರಿಯ ಸನ್ 2023-24ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು, ದಿನಾಂಕ.21-09-2024ರ ಶನಿವಾರ ಬೆಳಗ್ಗೆ : 10.30ಗಂಟೆಗೆ ನಮ್ಮ ಸಹಕಾರಿ ಕಚೇರಿ ಮುಂಭಾಗದಲ್ಲಿ, ಅಧ್ಯಕ್ಷರಾದ **ಶ್ರೀ ಪತ್ರೇಶ್ ಹಿರೇಮಠ್** ಇವರ ಘನ ಅಧ್ಯಕ್ಷತೆಯಲ್ಲಿ, ಸಹಕಾರಿ ಪತ್ತಿನ ಸಂಘದ ವಿಷಯಗಳನ್ನು ಚರ್ಚಿಸಲು ಸಭೆಯನ್ನು ಕರೆಯಲಾಗಿದೆ. ಸನ್ಮಾನ್ಯ ಸದಸ್ಯರು ಸಕಾಲದಲ್ಲಿ ಹಾಜರಿದ್ದು ಕಾರ್ಯಕಲಾಪದಲ್ಲಿ ಭಾಗವಹಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

**ದಿನಾಂಕ:** 29-08-2024.
**ಸ್ಥಳ:** ಹಗರಿಬೊಮ್ಮನಹಳ್ಳಿ.

ಸಹಿ/
ಕಾರ್ಯಕಾರಿ ಮಂಡಳಿ ಪರವಾಗಿ
(ಎಚ್.ಎಂ. ಶ್ರೀ ಯರ್ರಿಸ್ವಾಮಿ)
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

ವಿ.ಸೂ:
01- ಈ ಸಭೆಗೆ ಬರುವಾಗ ಈ ಪತ್ರ ತಪ್ಪದೇ ತರಬೇಕು.
02-ಸಾಮಾನ್ಯ ಸಭೆಯಲ್ಲಿ ಸಹಕಾರಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚಿಸಲು ಸದಸ್ಯರು ಬಯಸಿದಲ್ಲಿ 7ದಿನಗಳ ಮುಂಚಿತವಾಗಿ ಲಿಖಿತ ರೂಪದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸಲ್ಲಿಸಬೇಕು.

**ಶ್ರೀಸದ್ಗುರು ಮಹಾದೇವತಾತ ವಿವಿದೋದ್ದೇಶ ಸೌಹಾರ್ದ ಸಹಕಾರಿ, (ನಿ.)**

ಮಲ್ಲಿಕಾರ್ಜುನ ಕಾಂಪ್ಲೆಕ್ಸ್, ನೇತಾಜಿ ರಸ್ತೆ. ರಾಮನಗರ- ಹಗರಿಬೊಮ್ಮನಹಳ್ಳಿ.-583212. ವಿಜಯನಗರ ಜಿಲ್ಲೆ, ಫೋ:7338007770

**ಪತ್ರಿಕಾ ಪ್ರಕಟಣೆ**

**2023-24ನೇ ಸಾಲಿನ ಸಾಮಾನ್ಯ ಸಭೆಯ ಸೂಚನಾ ಪತ್ರ**

ನಮ್ಮ ಸಹಕಾರಿಯ ಸನ್ 2023-24ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ.21-09-2024ರ ಶನಿವಾರ ಬೆಳಗ್ಗೆ : 10.30 ಗಂಟೆಗೆ, ನಮ್ಮ ಸಹಕಾರಿ ಕಚೇರಿ ಮುಂಭಾಗದಲ್ಲಿ ಅಧ್ಯಕ್ಷರಾದ **ಶ್ರೀಮತಿ ಮಮತ ಸುರೇಶ ಚಿನಮಳ್ಳಿ** ಇವರ ಘನ ಅಧ್ಯಕ್ಷತೆಯಲ್ಲಿ, ಸಹಕಾರಿ ಪತ್ತಿನ ಸಂಘದ ವಿಷಯಗಳನ್ನು ಚರ್ಚಿಸಲು ಸಭೆಯನ್ನು ಕರೆಯಲಾಗಿದೆ. ಸನ್ಮಾನ್ಯ ಸದಸ್ಯರು ಸಕಾಲದಲ್ಲಿ ಹಾಜರಿದ್ದು ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

**ದಿನಾಂಕ:** 29-08-2024.
**ಸ್ಥಳ:** ಹಗರಿಬೊಮ್ಮನಹಳ್ಳಿ.

ಸಹಿ/
ಕಾರ್ಯಕಾರಿ ಮಂಡಳಿ ಪರವಾಗಿ
(ಎಚ್.ಎಂ.ಪಲ್ಲವಿ)
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

ವಿ.ಸೂ:
01- ಈ ಸಭೆಗೆ ಬರುವಾಗ ಈ ಪತ್ರ ತಪ್ಪದೇ ತರಬೇಕು.
02- ಸಾಮಾನ್ಯ ಸಭೆಯಲ್ಲಿ ಸಹಕಾರಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚಿಸಲು ಸದಸ್ಯರು ಬಯಸಿದಲ್ಲಿ, 7ದಿನಗಳ ಮುಂಚಿತವಾಗಿ ಲಿಖಿತ ರೂಪದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸಲ್ಲಿಸಬೇಕು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi — ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ-ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

**10 ನೇ ತರಗತಿ** **ಹಿಂದಿ**

### तुलसी के दोहे

**I . अनुरूपता :**

1) जीह : जीभ :: देहरी : ---- (दहलीज) (2019 )
2) दया : धर्म का मूल :: पाप : ----------
(अभिमान का मूल )
3) जीभ की तुलना : देहरी से :: राम नाम की तुलना : -------- ( दीप से ) ( 2018 )
4) सूरदास : कृष्णभक्ति शाखा :: तुलसीदास :----------- (रामभक्ति शाखा)

**II . एक वाक्य में उत्तर लिखिए |**

5)मुखिया किसके समान होना चाहिए ?
मुखिया **मुख के** समान होना चाहिए |
6) हंस का गुण कैसा होता है ?
**विकार को छोडकर अच्छे गोणो को अपनाना** हंस का गुण होता है |
7) मुख किसका पालन - पोषण करता है ?
मुख **देह के सारे अंगो का** पालन - पोषण करता है |
8) दया किसका मूल है ? ( 2022)
दया **धर्म का** मूल है |
9) पाप का मूल क्या है ?
पाप का मूल **अभिमान** है |
10) तुलसीदास जी अनुसार विपत्ति के साथी कौन है ?
तुलसीदास जी अनुसार विपत्ति के साथी **विद्या, विनय और विवेक** है |

**II. तीन-चार वाक्यों में उत्तर लिखिए |**

**11) मुखिया मुख सों चाहिए, खान पान को एक ।**
**पालै पोसै सकल अंग, तुलसी सहित विवेक ॥**

प्रस्तुत दोहे को गोस्वामी तुलसीदास जी के द्वारा रचित तुलसी के दोहे से चुन लिया गया है ।
प्रस्तुत दोहे में तुलसीदास जी मुख और मुखिया दोनों के स्वभाव की समानता दर्शाते हुए कहते है कि - मुखिया को मुँह के समान होना चाहिए । मुँह खाने - पीने का काम अकेला करता है, लेकिन वह जो खाता - पिता है उससे शरीर के सारे अंगों का पलन- पोषण करता है । तुलसी की राय में मुखिया को भी ऐसे विवेक--वान होना चाहिए कि वह काम अपनी ओर से करें लेकिन उसका फल सभी में बाँटे ।

**12) दया धर्म का मूल है, पाप मूल अभिमान ।**
**तुलसी दया न छाँडिये, जब लग घट में प्राण ॥**

प्रस्तुत दोहे को गोस्वामी तुलसीदास जी के द्वारा रचित तुलसी के दोहे से चुन लिया गया है ।
प्रस्तुत दोहे में तुलसीदास जी स्पष्टता: बताया है कि दया धर्म का मूल है और अभिमान पाप का | इसलिए कवि कहते हैं कि जब तक शरीर में प्राण है, तब तक मानव को अभिमान छोडकर दयालु बने रहना चाहिए |

**13) राम नाम मनि दीप धरू जीह देहरी द्वार |**
**तुलसी भितर बाहिरौ , जो चाहसी उजियार ||**

प्रस्तुत दोहे को गोस्वामी तुलसीदास जी के द्वारा रचित तुलसी के दोहे से चुन लिया गया है ।
प्रस्तुत दोहे में तुलसीदास जी कहते हैं कि जिस तरह देहरी पर दिया रखने से घर के भीतर तथा आँगन में प्रकाश फैलता है, उसी तरह राम - नाम जपने से मानव की आंतरिक और बाह्य शुद्धि होती है |

**व्याकरण ( विलोम शब्द )**

| | |
|---|---|
| पास X दूर | बडना X घटना |
| रात X दिन | अपना X पराया |
| गरीब X अमीर | बेचना X खरीदना |
| ईमान X बेईमान | हँसना X रोना |

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : **ಹೆಚ್.ತುಕಾರಾಮ್ ನಾಯ್ಕ,** ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

**ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055